


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor: MARUTIBASAVANTAPPAHOSAMANI
Cell : +91 9741319119



Volume : 06 Issue : 279 Monday 15-07-2024 E-mail : maruti.b.hosamani76@gmail.com Page: 4 Price : Rs. 1/-


## ಬ್ಯಾಡಗಿ ರೋಟರಿ ಮತ್ತು ಇನ್ನರ್‌ವೀಲ್ ಕ್ಲಬ್ ಪದಗ್ರಹಣ




**ಬ್ಯಾಡಗಿ:** ಪಟ್ಟಣದ BESM ಕಾಲೇಜು ಸಭಾ ಭವನದಲ್ಲಿ ಸ್ಥಳೀಯ ರೋಟರಿ ಕ್ಲಬ್ ಬ್ಯಾಡಗಿ ಮತ್ತು ಇನ್ನರ್ ವ್ಹೀಲ್ ಕ್ಲಬ್ ಬ್ಯಾಡಗಿ 2024–25 ನೇ. ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ವಿಜೃಂಭಣೆಯಿಂದ ನಡೆಯಿತು. ಸಮಾರಂಭದಲ್ಲಿ ಗೋವಾದಿಂದ ಆಗಮಿಸಿದ್ದ 2026–27 ನೇ. ಸಾಲಿನ ಗವರ್ನರ್ ಡಾ. ಲೆನ್ನಿ ಡಾ ಕೋಸ್ಟಾ ಅವರು ಪ್ರಮಾಣ ವಚನ ಬೋಧಿಸಿ ನೂತನ ಅಧ್ಯಕ್ಷರ ಮತ್ತು ಪದಾಧಿಕಾರಿಗಳ ಅಧಿಕಾರ ಹಸ್ತಾಂತರ ಮಾಡಿಸಿದರು. ಎಸ್ ಎಂ ಬೂದಿಹಾಮಠ ಇವರು ರೋಟರಿ ಕ್ಲಬ್ಬಿನ ಅಧ್ಯಕ್ಷರಾಗಿ ನಿರಂಜನ ಶೆಟ್ಟಿಹಳ್ಳಿ ಕಾರ್ಯದರ್ಶಿಯಾಗಿ ಮತ್ತು ಇನ್ನರ್‌ವೀಲ್ ಕ್ಲಬ್ಬಿನ ಶ್ರೀಮತಿ ಕವಿತಾ ಸೊಪ್ಪಿನಮಠ ಅಧ್ಯಕ್ಷರಾಗಿ ಶ್ರೀಮತಿ ರೂಪಾ ಕಡೆಕೊಪ್ಪ ಕಾರ್ಯದರ್ಶಿಯಾಗಿ ಹುಬ್ಬಳ್ಳಿಯಿಂದ ಆಗಮಿಸಿದ್ದ ಶ್ರೀಮತಿ ಸಹನಾ ಪೈಕೋಟಿ ಇನ್ನರ್ ವ್ಹೀಲ್ ಡಿಸ್ಟ್ರಿಕ್ಟ್ ೩೭೭ ಅವರಿಂದ ಅಧಿಕಾರ ಹಸ್ತಾಂತರ ಸ್ವೀಕರಿಸಿದರು. ರಾಣೆಬೆನ್ನೂರಿನ ಡಾ. ಬಸವರಾಜ್ ಕೆಲಗಾರ ಉದ್ಘಾಟನೆ ನಡೆಸಿದರು ಅಸಿಸ್ಟೆಂಟ್ ಗವರ್ನರ್ ಮಂಜುನಾಥ ಉಪ್ಪಾರ ಇನ್ನುಳಿದ ಪದಾಧಿಕಾರಿಗಳ ಪದಗ್ರಹಣ ನೆರವೇರಿಸಿದರು. ನಂತರ ಸಮಾರಂಭವನ್ನು ಉದ್ದೇಶಿಸಿ ಡಿಸ್ಟ್ರಿಕ್ಟ್ ಗವರ್ನರ್ ಕ್ಲಬ್ ಗಳಿಗೆ ನೀಡಿದ ಗೋಲ್ಸ್ ಗಳನ್ನು ವಿವರಿಸಿದರು ತಮಗೆ ನೀಡಿದ ಗೋಲುಗಳನ್ನು ಸಾಧಿಸಲು ಅಧ್ಯಕ್ಷರಿಗೆ ಎಲ್ಲಾ ಸರ್ವ ಸದಸ್ಯರು ಸಹಾಯ ಸಹಕಾರ ನೀಡಿ ಕಬ್ಬಿನ ಹೆಸರು ತರುವಲ್ಲಿ ಸಕ್ರಿಯರಾಗಬೇಕೆಂದು ವಿನಂತಿಸಿದರು. ನಂತರ ಡಾ. ಲೇನ್ನಿ ಡಾ ಕೋಸ್ಟಾ ಮಾತನಾಡಿ ನಿಮ್ಮ ಕ್ಲಬ್ ಚಿಕ್ಕದಿದ್ದರೂ ಅದ್ದೂರಿಯಾಗಿ ಸಮಾರಂಭ ನಡೆಸಿದ್ದೀರಿ ಗೋವಾದಿಂದ ನನ್ನನ್ನು ಬರ ಮಾಡಿಕೊಂಡು ಉತ್ತಮ ರೀತಿಯಲ್ಲಿ ಸಮಾರಂಭ ನಡೆಸಿಕೊಡಲು ಯಶಸ್ವಿಯಾಗಿದ್ದೀರಿ ನೂತನ ಎಲ್ಲ ಪದಾಧಿಕಾರಿಗಳಿಗೆ ಅಭಿನಂದನೆಗಳನ್ನು ತಿಳಿಸಿ ಕ್ಲಬ್ಬಿನ ಪರವಾಗಿ ಉತ್ತಮ ದೊಡ್ಡ ಮಟ್ಟದ ಸೇವಾ ಕಾರ್ಯಗಳನ್ನು ಮಾಡಿರಿ, ಡಿಸ್ಟ್ರಿಕ್ಟ್ ಸಹಾಯ ಪಡೆದು ದೊಡ್ಡ ಪ್ರಮಾಣದ ಗ್ಲೋಬಲ್ ಗ್ರಾಂಟ್ ಪಡೆದು ಪಟ್ಟಣದಲ್ಲಿ ದೊಡ್ಡ ದೊಡ್ಡ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ ಅದಕ್ಕೆ ಬೇಕಾದ ಅರ್ಧ ಮೊತ್ತ ರೋಟರಿ ಫೌಂಡೇಶನ್ ನೀಡುತ್ತದೆ, ಇನ್ನುಳಿದ ಅರ್ಧ ಮೊತ್ತಕ್ಕೆ ಸ್ಥಳೀಯ ದೊಡ್ಡ ದೊಡ್ಡ ಉದ್ಯಮಿಗಳ ಸಹಾಯ ಪಡೆಯಿರಿ ಎಂದು ತಿಳಿಸಿದರು ಅಲ್ಲದೇ ಮಾಜಿ ಅಧ್ಯಕ್ಷ ಬಸವರಾಜ ಸುಂಕಾಪುರ ಇವರ ಅವಧಿಯಲ್ಲಿ 80000 ಮೌಲ್ಯದ ವೀಲ್ ಚೇರ್ ಮತ್ತು ಮಾಜಿ ಅಧ್ಯಕ್ಷ ಮಂಜುನಾಥ ಉಪ್ಪಾರ ಅವರ ಅವಧಿಯಲ್ಲಿ 1.60.000 ಮೊತ್ತದ ವ್ಹೀಲ್ ಚೇರ್ ಗಳನ್ನು ನನ್ನಿಂದ ಮಂಜುನಾಥ ಉಪ್ಪಾರ ಇವರು ಒತ್ತಾಯಪೂರ್ವಕವಾಗಿ ಮಂಜೂರು ಮಾಡಿಸಿಕೊಂಡಿದ್ದನ್ನು ನೆನಪಿಸಿಕೊಂಡರು. ನಂತರ ಡಾ. ಲ್ಯಾನಿ ಡಾ ಕೋಸ್ಟಾ ಅವರು 2022–23ನೇ ಸಾಲಿನ ಮಂಜುನಾಥ ಉಪ್ಪಾರ ಇವರ ಅಧ್ಯಕ್ಷ ಅವಧಿಯಲ್ಲಿ ಡಿಸ್ಟ್ರಿಕ್ಟಿ ್ನಂದ ಗಳಿಸಿದ 9 ಅವಾರ್ಡ್ ಗಳನ್ನು ಕ್ಲಬ್ ಸದಸ್ಯರಿಗೆ ವಿತರಿಸಿದರು. ಹಾಗೂ ಮಂಜುನಾಥ ಉಪ್ಪಾರ ಅವರ ಅವಧಿಯ ಆರು ಜನ ಪಾಲ್ ಹ್ಯಾರಿಸ್ ಫೆಲೋ ಸರ್ಟಿಫಿಕೇಟ್ ಗಳನ್ನು ನೀಡಿದರು ಒಂದು ಪಾಲ್ ಹ್ಯಾರಿಸ್ ಫೆಲೋ ಪಡೆಯಲು 1,000 ಯುಎಸ್ ಡಾಲರ್(83000?)ಗಳನ್ನು ರೋಟರಿ ಫೌಂಡೇಶನ್ ಗೆ ಡೊನೇಟ್ ಮಾಡಬೇಕಾಗುತ್ತದೆ ಇಂತಹ ಆರು ಸದಸ್ಯರಾದ ಬಸವರಾಜ ಸುಂಕಾಪುರ, ಸುರೇಶ ಗೌಡರ, ಜೆ ಎಚ್ ಪಾಟೀಲ, ಮಂಜುನಾಥ ಉಪ್ಪಾರ, ಅನಿಲಕುಮಾರ ಬೊಡ್ಡಪಾಟಿ, ಮಾಲತೇಶ ಉಪ್ಪಾರ ಇವರನ್ನು ಮನಒಲಿಸಿ ಒಪ್ಪಿಸಿ ಅವರಿಂದ ಡೋನೇಶನ್ ಪಡೆದು ಒಂದೇ ವರ್ಷದಲ್ಲಿ ಮಾಡಿರುವುದು ದೊಡ್ಡ ಸಾಧನೆ ಎಂದು ತಿಳಿಸಿದರು.

ನಂತರ ಅಧಿಕಾರ ಹಸ್ತಾಂತರ ಪಡೆದ ನೂತನ ಅಧ್ಯಕ್ಷ ಎಸ್ ಎಂ ಬೂದಿಹಾಳಮಠ ಮಾತನಾಡಿ ಹಿಂದಿನ ಎಲ್ಲಾ ಸದಸ್ಯರು ತಮ್ಮ ತಮ್ಮ ಅವಧಿಯಲ್ಲಿ ಅನೇಕ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ ಅವರೆಲ್ಲರ ಮಾರ್ಗದರ್ಶನದೊಂದಿಗೆ ಸದಸ್ಯರ ಅಭಿಪ್ರಾಯದ ಮೇರೆಗೆ ಎಲ್ಲರ ಸಹಾಯ ಸಹಕಾರದೊಂದಿಗೆ ಪಟ್ಟಣದಲ್ಲಿ ಹೆಚ್ಚು ವಿನೂತನ ದೊಡ್ಡ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳುತ್ತೇನೆ ಎಂದು ಭರವಸೆ ನೀಡಿ–ದರು. ಅದೇ ರೀತಿಯಾಗಿ ಇನ್ನರ್ ವ್ಹೀಲ್ ಕಬ್ಬಿನ ನೂತನ ಅಧ್ಯಕ್ಷ ಶ್ರೀಮತಿ ಕವಿತಾ ಸೊಪ್ಪಿನಮಠ ಅಧಿಕಾರ ಹಸ್ತಾಂತರ ಪಡೆದು ಮಾತನಾಡಿ ನಮ್ಮ ಸದಸ್ಯರ ಸಹಕಾರದೊಂದಿಗೆ ರೋಟರಿ ಸದಸ್ಯರ ಸಹಕಾರದೊಂದಿಗೆ ಅತಿಹೆಚ್ಚು ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಇನ್ನರ್‌ವೀಲ್ ಧೆಯೋದ್ದೇಶಗಳನ್ನು ಪೂರೈಸುತ್ತೇನೆ ಎಂದು ಆಶ್ವಾಸನೆ ನೀಡಿ–ದರು. ಸಮಾರಂಭದಲ್ಲಿ ವಿಶೇಷವಾಗಿ ಪುರಸಭೆಯ ಮುಖ್ಯ ಅಧಿಕಾರಿಗಳಾದ ವಿನಯಕುಮಾರ ಹೊಳೆಪ್ಪಗೋಳ, ಹಾವೇರಿ ಯೂನಿವರ್ಸಿಟಿ ಸಿಂಡಿಕೇಟ್ ಮೆಂಬರ್ ಆಗಿ ನಿಯುಕ್ತಗೊಂಡ ಶ್ರೀ ಎಸ್ ಜಿ ವೈದ್ಯ, ರಾಜ್ಯ ಸರಕಾರದಿಂದ ಶ್ರೇಷ್ಠ ವೈದ್ಯ ಪ್ರಶಸ್ತಿ ಪಡೆದ ಡಾ. ರಾಜೇಶ್ವರಿ ಚನ್ನಗೌಡ್ರ, ಇತ್ತೀಚೆಗೆ ನೀಟ್ ಎಕ್ಸಾಮ್ ನಲ್ಲಿ ಹಾವೇರಿ ಜಿಲ್ಲೆಗೆ ಹೆಚ್ಚು ಅಂಕ ಗಳಿಸಿದ ಸತೀಶಗೌಡ ಮಲ್ಲನಗೌಡ ಇವರಿಗೆ ಸನ್ಮಾನ ಸಮಾರಂಭ ಏರ್ಪಡಿಸಿದ್ದರು.

ಈ ಸಂದರ್ಭದಲ್ಲಿ ರೋಟರಿ ಕ್ಲಬ್ಬಿನ ಸರ್ವ ಸದಸ್ಯರು ಇನ್ನರ್ ವ್ಹೀಲ್ ಕ್ಲಬ್ಬಿನ ಸರ್ವ ಸದಸ್ಯರು ಹಾವೇರಿ ಮತ್ತು ರಾಣೆಬೆನ್ನೂರು ರೋಟರಿ ಮತ್ತು ಇನ್ನರ್‌ವೀಲ್ ಕ್ಲಬ್ಬಿನ ಸದಸ್ಯರು ಅಭಿನಂದನೆ ಸಲ್ಲಿಸಲು ಆಗಮಿಸಿದ್ದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎಂ.ಎಂ. ಶರ್ಮಾ ಬೆಳಗಾವಿ**

## ಶಿಕ್ಷಕರ ಸಮಸ್ಯೆ ಪರಿಹಾರಕ್ಕೆ ಸಂಘ ಸದಾ ಸಿದ್ದ: ಸಂಗಮೇಶ ಪಾಟೀಲ




**ಕಮತಗಿ :** ತಾಲೂಕಾ ಹಂತದ ಶಿಕ್ಷಕರ ಸಮಸ್ಯೆಗಳಾದ ಶಿಕ್ಷಕರಿಗೆ ಬಿ.ಎಲ್.ಓ ಕಾರ್ಯದ ಒತ್ತಡ , ನಿವೃತ್ತ ನೌಕರರ ಸಮಸ್ಯೆ, ಬಡ್ತಿ ವೇತನ, ಕಾಲಮಿತಿ ಬಡ್ತಿ ಸರಿಯಾದ ಸಮಯಕ್ಕೆ ಅನುಷ್ಟಾನ ವಾಗದಿರುವುದು, ಸೇವಾ ಪುಸ್ತಕದ ಪರಿಶೀಲನೆ. ಹೀಗೆ ಹತ್ತು ಹಲವು ಶಿಕ್ಷಕರ ಸಮಸ್ಯೆಗಳ ಪಟ್ಟಿಯನ್ನು ಸ್ವೀಕರಿಸಿ ತಮ್ಮೆಲ್ಲ ಸಮಸ್ಯೆ ಪರಿಹಾರಕ್ಕೆ ಸಂಘ ಸದಾ ಸಿದ್ದ ಎಂದು ಹುನಗುಂದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಂಗಮೇಶ ಪಾಟೀಲ ತಿಳಿಸಿದರು.

ಇಲ್ಲಿನ ಕೆ ಜಿ ಎಸ್ ನಂ1 ಶಾಲೆಯಲ್ಲಿ "ಸಂಘದ ನಡಿಗೆ ಶಿಕ್ಷಕರ ಕಡೆಗೆ" ಕಮತಗಿ ಹಾಗೂ ಮೂಗನೂರ ಭಾಗದ ಶಿಕ್ಷಕರ ಸಮಸ್ಯೆಯ ಪರಿಹಾರಕ್ಕಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು "ಶಿಕ್ಷಕರ ಸಮಸ್ಯೆಗಳನ್ನು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕಛೇ–ರಿಯ ಸಿಬ್ಬಂದಿಗಳ ಗಮನಕ್ಕೆ ತಂದು ಸಂಘ ಹಾಗೂ ಹಿರಿಯ ಮಾರ್ಗದರ್ಶಿ ಶಿಕ್ಷಕರ ಸಹಾಯದಿಂದ ಸೂಕ್ತ ಪರಿಹಾರ ಕೊಡಿಸುವುದಾಗಿ ತಿಳಿಸಿದರು".

ಹಿರಿಯ ಶಿಕ್ಷಕರಾದ ಖ ಓ ಶೆಟ್ಟರ, ಖ ಉ ಹುದ್ದಾರ್, ಕುದರಿ ಗುರುಗಳು ಮಾತನಾಡಿ ಸಂಘವು ಶಿಕ್ಷಕರ ಬಳಿಗೆ ಬಂದು ಅವರ ಸಮಸ್ಯೆಗಳನ್ನು ಆಲಿಸಿ ಸೂಕ್ತ ಪರಿಹಾರ ಕ್ರಮ ಕೈ ಗೊಳ್ಳುತ್ತಿರುವುದು ಶ್ಲಾಘನೀಯ ಹಾಗೂ ಮಾದರಿ ಕಾರ್ಯವಾಗಿದೆ ಎಂದರು.

ಜಿ.ಎ.ಗೌಡರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಎಸ್ ಬಿ ತುಂಬರಗುದ್ದಿ, ಎಸ್ ಪಿ ಮಾದಿನಾಳ, ಪಿ.ಎಸ್.ಚವಾಣ್, ಶ್ರೀ ಶೆಟ್ಟರ್ , ಎಂ ಜಿ ಗೌಡರ, ಶ್ರೀ ಹಲಕಟ್ಟಿ, ಶ್ರೀ ಮಕಾನ್ದಾರ ಹಾಗೂ ಕಮತಗಿ, ಮೂಗನೂರ ಶಾಲೆಗಳ ಮುಖ್ಯ ಗುರುಗಳು ಮತ್ತು 70ಕ್ಕೂ ಶಿಕ್ಷಕರು ಹಾಜರಿದ್ದರು.

ಸಂಘದ ಪದಾಧಿಕಾರಿಗಳಾದ ಶ್ರೀಮತಿ ತುಳಜಾಬಾಯಿ ಬೊಂಬ್ಲೆ, ರಮೇಶ್ ಕೊಳಗೇರಿ, ನಡುವಿನಮನಿ, ಕಾಂಬಳೆ, ರಾಜು ಸುಂಕದ, ಶ್ರೀ ಮುತ್ತಪ್ಪ ಪೂಜಾರಿ ಶರಣಪ್ಪ ಮರೋಳ ಮತ್ತಿತರು ಹಾಜರಿದ್ದರು.

ಪಿ.ಜಿ.ಬಾಳಕ್ಕನವರ ಪ್ರಾರ್ಥಸಿದರು. ರಮೇಶ್ ಮಿಣಜಿಗಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್ ಬಿ ಬಿಜಾಪೂರ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

## ನಿರೂಪಕಿ ಅಪರ್ಣರವರಿಗೆ ಭಾವ ಪೂರ್ಣ ನುಡಿ ನಮನ



ಮತ್ತೇ ಹುಟ್ಟಿ ಬನ್ನಿ ಓ ಕರುನಾಡ ಕಂಠಸಿರಿಯೇ
ಕನ್ನಡ ನಾಡಿನ ಮುದ್ದಿನ ಕುವರಿಯೇ
ಚಂದನ ವನದ ಐಸಿರಿಯೆ
ಸುಂದರ, ಚೆಂದದ ಭಾಷೆಯ ಅಂದದಿ ನುಡಿವ ಕನ್ನಡತಿಯೆ
ನಿರೂಪಕಿಯಾಗಿ, ನಟಿಯಾಗಿ
ನಿಮ್ಮ ಸೇವಾ ಕೈಂಕರ್ಯ ಮಹತ್ವ ಪೂರ್ಣ
ನಿಮ್ಮ ಜೀವನವೇ ಮಹಾ ಸಮರ್ಪಣ ॥1॥
ಅಪ್ಪಟ ಕನ್ನಡವನು ಸ್ಪಷ್ಟವಾಗಿ ಉಳಿಯುವ ಕನ್ನಡದ ಕೋಗಿಲೆಯ
ಸರಳತೆಯನ್ನು ಮೈದಂಬಿ ಕೊಂಡ
ಮುಗ್ಧ ಮನದ ಅರಸಿಯೇ
ಸದಾ ಹಸನ್ಮುಖತೆ, ಜೀವನೋತ್ಸಹ
ಎದ್ದು ಕಾಣುವ ಮುಖ ಭಾವ
ಇತರರಿಗೆ ಮಾದರಿಯಾಗುವ ಅಪ್ರಮೇಯ ವ್ಯಕ್ತಿತ್ವವೆ
ಮತ್ತೆ ಹುಟ್ಟಿ ಬನ್ನಿ ಓ ಕರುನಾಡ ಕಂಠ ಸಿರಿಯೇ॥2॥
ತಮ್ಮ ಅಪ್ರತಿಮ ನಡೆಯಿಂದ, ಅಪೂರ್ವ ನುಡಿಗಳಿಂದ
ಕನ್ನಡಿಗರ ಮನ ಗೆದ್ದ ಕರುನಾಡಿನ ಅನನ್ಯ ಚೇತನವೇ
ರವಿ ತೇಜಸಂತೆ ತನ್ನ ಕಾಂತಿಯನು
ಸುತ್ತಲು ಪಸರಿಸುತ್ತಾ ಇತರರಿಗೆ
ಬೆಳಕು ಕೊಡುವ ದಿವ್ಯ ಚೇತನವೇ
ನೋವಿನಲ್ಲೂ ನಗೆಯ ಚಿಮ್ಮಿಸಿ
ಇತರರನ್ನು ನಗಿಸುವ ನಗೆಯ ಕಾರ?ಂಜಿಯೆ
ಮತ್ತೆ ಹುಟ್ಟಿ ಬನ್ನಿ ಓ ಕರುನಾಡ ಕಂಠ ಸಿರಿಯೇ ॥3॥
ನಿಮ್ಮ ಮುಗ್ಧ – ಸ್ನಿಗ್ಧ ನಗುವಿನಿಂದ
ಶುದ್ಧ, ಸ್ಪಷ್ಟ ನುಡಿಗಳಿಂದ
ಕನ್ನಡಿಗರ ಹೃನ್ಮನಗಳಲ್ಲಿ
ರಾರಾಜಿಸುತಿರುವ ಅಪೂರ್ವ ಮಾಣಿಕ್ಯವೇ
ನಿಮ್ಮ ಮಧುರ ಕಂಠಕ್ಕೆ ಮನ ಸೋತು ಆ ದೇವರೇ ನಿಮ್ಮನ್ನು
ತನ್ನೆಡೆಗೆ ಸೆಳೆದಿರುವ
ನಮ್ಮೆಲ್ಲರನ್ನು ಅಗಲಿ
ಬಾರದ ಲೋಕಕ್ಕೆ ಪಯಣಿಸಿದ ಮಸಣದ ಹೂವೆ
ಮತ್ತೆ ಹುಟ್ಟಿ ಬನ್ನಿ ಓ ಕರುನಾಡ ಕಂಠಸಿರಿಯೇ ॥4॥
ಸುಂದರ, ಸುಮಧುರ ನುಡಿಯ ಸಾರಥಿಯೆ
ನಿರೂಪಣೆಯೇ ನಿಮ್ಮ ಜೀವನಾಡಿ
ಸ್ಪಷ್ಟ, ಶುದ್ದ ಮಾತಿನ ಮೋಡಿಯಿಂದ
ಎಲ್ಲರ ಮನ ಸೂರೆಗೊಂಡ ಕನ್ನಡದ ಅರಸಿಯೆ
ನಿಮ್ಮ ಅಗಲಿಕೆಯಿಂದ ಅನಾಥವಾಗಿದೆ ಕನ್ನಡ ಸಾರಸ್ವತ ಲೋಕ
ನೀವ್ ಅಗಲಿದರೂ ನಿಮ್ಮ ಹೆಸರು
ಸಾಧನೆಗಳು ಅಮರ ಅಜರಾಮರ
ಮತ್ತೇ ಹುಟ್ಟಿ ಬನ್ನಿ ಓ ಕರುನಾಡ ಕಂಠ ಸಿರಿಯೇ ॥5॥

– ಎಂ.ಎಸ್. ಆಶಾಲತಾ ಶಾಖಾ ವ್ಯವಸ್ಥಾಪಕರು, ಎಂ. ಡಿ. ಸಿ. ಸಿ. ಬ್ಯಾಂಕ್, ಕೆ ಹೊನ್ನಲಗೆರೆ ಶಾಖೆ


## ವಿಶ್ವ ಜನಸಂಖ್ಯಾ ನಿಯಂತ್ರಣ ದಿನ ಆಚರಣೆ




**ಕೊಪ್ಪಳ :** ಕೊಪ್ಪಳ ಇನ್ನರ್ ವ್ಹೀಲ್ ಕ್ಲಬ್ ವತಿಯಿಂದ ನಗರ ದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ವಿಶ್ವ ಜನಸಂಖ್ಯಾ ನಿಯಂತ್ರಣ ದಿನ ಆಚರಿಸಲಾಯಿತು. ಸಮಾರಂಭದ ಉದ್ಘಾಟನೆಯನ್ನು ಪತ್ರಕರ್ತೆ ಹೋರಾಟಗಾರ್ತಿ ಶ್ರೀಮತಿ ಸಾವಿತ್ರಿ ಮುಜಮ್ದಾರ ನೆರವೇರಿಸಿ ಮಾತನಾಡಿ ಜನಸಂಖ್ಯೆ ದೇಶದ ಸಂಪತ್ತು ಆದರೆ ಅದು ಅತಿಯಾದರೆ ದೇಶಕ್ಕೆ ಬಹುದೊಡ್ಡ ಸಮಸ್ಯೆ ಯಾಗಿ ಕಾಡುತ್ತಿದೆ ಎಂದರು , ಜನಸಂಖ್ಯಾ ಸ್ಫೋಟದಿಂದ ಆಗುವ ಪರಿಣಾಮದ ಬಗ್ಗೆ ಮಾತನಾಡಿ

ಬಡತನ, ನಿರುದ್ಯೋಗ, ಅನಕ್ಷರತೆ, ಅನಾರೋಗ್ಯ ಮತ್ತು ಹಸಿವು ಜಲಕ್ಷಾಮ ಮುಂತಾದ ಸಮಸ್ಯೆಗಳಿಗೆ ಮೂಲ ಕಾರಣವಾದ ಜನಸಂಖ್ಯಾ ಸ್ಫೋಟವನ್ನು ನಿಯಂತ್ರಿಸುವಲ್ಲಿ ಸರಕಾರ ಮತ್ತು ನಾಗರಿಕರು ಸಹಮತದಲ್ಲಿ ಪ್ರಯತ್ನಿಸಬೇಕು. ಜನಸಂಖ್ಯಾ ಸ್ಫೋಟದಲ್ಲಿ ಜಗತ್ತಿನಲ್ಲಿ ಭಾರತವೇ ಪ್ರಥಮ ಸ್ಥಾನ ಹೊಂದಿದೆ ಎನ್ನುವುದು ಕಳವಳಕಾರಿ. ಜನಸಂಖ್ಯಾ ನಿಯಂತ್ರಣ ದ ವೈದ್ಯಕೀಯ ವಿಧಾನಗಳ ಬಗ್ಗೆ ಅರಿವು ಇಲ್ಲದ ಕಾರಣ ಜನಸಂಖ್ಯಾ ಸ್ಫೋಟ ಸಂಭವಿಸುತ್ತಿದೆ. ಜಾಗೃತಿ , ವೈದ್ಯಕೀಯ ನೆರವು, ಶಿಕ್ಷಣದಂತಹ ಕ್ರಮಗಳ ಮೂಲಕ ಜನಸಂಖ್ಯಾ ನಿಯಂತ್ರಣವನ್ನು ಮಾಡಿ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕು ಎಂದು ಸಾವಿತ್ರಿ ಮುಜಮ್ದಾರ್ ಹೇಳಿದರು. ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ ಎಚ್.ಎಸ್.ಬಾರಕೇರ್ ವಹಿಸಿದ್ದರು. ಈ ಕಾರ್ಯಕ್ರಮ ದ ರೂವಾರಿ ಇನ್ನರ್ ವ್ಹೀಲ್ ಕ್ಲಬ್ ನ ಅಧ್ಯಕ್ಷರಾದ ಉಮಾ ತಂಬ್ರಳ್ಳಿ ಯವರು ಕಾರ್ಯಕ್ರಮವನ್ನು ಉದ್ದೇಶಿ ಪ್ರಾಸ್ತಾವಿಕವಾಗಿಸಿ ಮಾತನಾಡಿ ಜನಸಂಖ್ಯಾ ನಿಯಂತ್ರಣ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು . ಉಪನ್ಯಾಸಕರಾದ ಲಲಿತಾ ಕಡಿ ಯವರು ಸ್ವಾಗತಿಸಿ, ನಿರೂಪಿಸಿದರು. ವಂದನಾರ್ಪಣೆಯನ್ನು ಇನ್ನರ್ ವ್ಹೀಲ್ ಕ್ಲಬ್ ನ ಕಾರ್ಯದರ್ಶಿ ಮೀನಾಕ್ಷಿ ಬಣ್ಣದಬಾವಿ ಯವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರು ಜನಸಂಖ್ಯಾ ನಿಯಂತ್ರಣ ಕುರಿತು ವಿವಿಧ ಘೋಷಣೆಗಳನ್ನು ಕೂಗುತ್ತ ಅರಿವು ಮೂಡಿಸಿದರು.

## ಅಜ್ಮೀರ್ ದರ್ಗಾದಲ್ಲಿ ಡಾ. ಕಲಾಲ್ ಕುಟುಂಬದಿಂದ ವಿಶೇಷ ಪ್ರಾರ್ಥನೆ



**ಕೊಪ್ಪಳ :** ರಾಷ್ಟ್ರೀಯ ಭಾವೈಕ್ಯತೆಯ ತಾಣ ,ಪವಿತ್ರ ಧಾರ್ಮಿಕ ಸು ಕ್ಷೇತ್ರ ಹಜರತ್ ಖಾಜಾ ಗರೀಬನ ನವಾಜ್ ದರ್ಗಾ ಶರೀಫ್ ರಾಜಸ್ಥಾನದ ಅಜ್ಮೀರ್ ಗೆ ಕೊಪ್ಪಳ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯ ನಿವೃತ್ತ ಜಿಲ್ಲಾ ಸರ್ಜನ್ ಹಿರಿಯ ವೈದ್ಯ ಡಾ, ಸುಶೀಲ್ ಕುಮಾರ್ ಕಲಾಲ್ ಕುಟುಂಬದವರು ಇತ್ತೀಚೆಗೆ ಪವಿತ್ರ ಕ್ಷೇತ್ರಗಳ ದರ್ಶನ ಯಾತ್ರೆ ಪ್ರವಾಸ ಕೈಗೊಂಡು ಅಜ್ಮೀರ್ ದರ್ಗಾದಲ್ಲಿ ತಮ್ಮ ತಂದೆ ತಾಯಿ ಯವರ ಸ್ಮರಣೆಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಡಾ, ಸುಶೀಲ್ ಕುಮಾರ್ ಕಲಾಲ್ ಅವರೊಂದಿಗೆ ಅವರ ಧರ್ಮ ಪತ್ನಿ ಶ್ರೀಮತಿ ನಾಜನಿ ಕಲಾಲ್ ಮತ್ತು ಅವರ ಸುಪುತ್ರ ಡಾ, ಪ್ರಶಾಂತ್ ಕಲಾಲ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ದಿ. 31 ರಂದು ಎಸ್.ಆರ್. ಪಾಟೀಲ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಲೋಕಾರ್ಪಣೆ



**ಬಾಗಲಕೋಟೆ:** ಎಸ್.ಆರ್.ಪಾಟೀಲ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಜುಲೈ 31 ರಂದು ಲೋಕಾರ್ಪಣೆಗೊಳ್ಳಲಿದೆ ಎಂದು ಸಂಸ್ಥಾಪಕ ಅಧ್ಯಕ್ಷ, ಮಾಜಿ ಸಚಿವ ಎಸ್.ಆರ್.ಪಾಟೀಲ ಹೇಳಿದರು.

ಸೋಮವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾತ್ಮ ಗಾಂಧೀಜಿ ಹಾಗೂ ಎಪಿಜೆ ಅಬ್ದುಲ್ ಕಲಾಂ ಅವರ ವಿಚಾರಧಾರೆಗಳನ್ನು ಅನುಷ್ಠಾನಕ್ಕೆ ತರುವ ಹಿನ್ನೆಲೆಯಲ್ಲಿ ಜಿಲ್ಲೆಯ ಬೀಳಗಿ ತಾಲೂಕಿನ ಸ್ವಗ್ರಾಮವಾದ ಬಾಡಗಂಡಿಯಲ್ಲಿ ಸ್ಥಾಪನೆ ಮಾಡಿದ್ದು ಸಂತೋಷ ವಾಗಿದೆ ಎಂದರು.

ರಾಷ್ಟ್ರೀಯ ವೈದ್ಯಕೀಯ ಪರಿಷ ತ್ತು ಜು.6 ರಂದು ವೈದ್ಯಕೀಯ ಮಹಾವಿದ್ಯಾಲಯಕ್ಕೆ ಅನುಮತಿ ನೀಡಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಬಾಗಲಕೋಟೆ ಜಿಲ್ಲೆಗೆ ಇದು ಎರಡನೇ ಮಹಾವಿದ್ಯಾ ಲಯ ವಾಗಿದ್ದು, ಸಾವಿರಾರು ಜನರಿಗೆ ಆರೋಗ್ಯ ಭಾಗ್ಯ ನೀಡುವುದು ಮಹತ್ವದ ಕೆಲಸವಾಗಿದೆ. ನುರಿತ ವೈದ್ಯರ ತಂಡ ಸೇವೆ ಮಾಡಲಿದೆ. ಸುಮಾರು 500 ಕೋಟಿ ರೂ. ವೆಚ್ಚದಲ್ಲಿ ವೈದ್ಯಕೀಯ ಮಹಾ ವಿದ್ಯಾಲಯ ನಿರ್ಮಾಣ ಮಾಡ ಲಾಗಿದ್ದು ನಮ್ಮ ಸಂಸ್ಥೆಯಲ್ಲಿ 10 ಸಾವಿರಕ್ಕಿಂತ ಹೆಚ್ಚು ಜನರಿಗೆ ಉದ್ಯೋಗ ನೀಡಿದ್ದೇವೆ ಎಂದು ಅಭಿಮಾನ ವ್ಯಕ್ತಪಡಿಸಿದರು.

ವಿಜಯಪುರ–ಬಾಗಲಕೋಟೆ ಅವಳಿ ಜಿಲ್ಲೆಯ ಗ್ರಾಮೀಣ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಬಾಡಗಂಡಿ ಗ್ರಾಮದಲ್ಲಿ ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪಿಸಿದ್ದೇವೆ. ಹಳ್ಳಿಯಿಂದ ಜನ ಪಟ್ಟಣಕ್ಕೆ ಹೋಗಬೇಕಾದ ಸ್ಥಿತಿ ಇದೆ. ಈ ವ್ಯವಸ್ಥೆ ತಪ್ಪಿ ಅಬ್ದುಲ್ ಕಲಾಂ ಅವರ ಆಶಯದಂತೆ ಜನ ಪಟ್ಟಣದಿಂದ ಜನರು ಹಳ್ಳಿ ಕಡೆ ಬರಬೇಕು ಎನ್ನುವ ಉದ್ದೇಶ ಹೊಂದಲಾಗಿದೆ. ಹಾಗಾಗಿ ಇಂತಹ ಕಾರ್ಯಕ್ಕೆ ಮುಂದಾಗಿದ್ದೇವೆ. ಆಸ್ಪತ್ರೆಯು ಸದ್ಯ 630 ಹಾಸಿಗೆ ಬೆಡ್ ಹೊಂದಿದ್ದು, 250 ವಿದ್ಯಾರ್ಥಿಗಳಿಗೆ ಸೌಲಭ್ಯ ಒದಗಿಸಲಾಗಿದೆ. ಸದ್ಯಕ್ಕೆ 100 ಜನ ವಿದ್ಯಾರ್ಥಿಗಳ ಕಲಿಕೆಗೆ ಅವಕಾಶ ಲಭ್ಯವಾಗಿದೆ ಎಂದರು.

ಜುಲೈ 31 ರಂದು ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸಚಿವರಾದ ಶರಣಪ್ರಕಾಶ ಪಾಟೀಲ, ದಿನೇಶ ಗುಂಡೂರಾವ್ ಸೇರಿದಂತೆ ಕೇಂದ್ರ ಸಚಿವರು, ರಾಜ್ಯ ಸಚಿವರು ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಆಸ್ಪತ್ರೆಯ ಆವರಣದಲ್ಲಿ "ನಿಮ್ಮನ್ನು ಹೆತ್ತವರ ಮಂದಿರ" ಸ್ಥಾಪನೆ ಮಾಡಿದ್ದು ಅದು ಕೂಡಾ ಲೋಕಾರ್ಪಣೆಗೊಳ್ಳಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಎಂ.ಎನ್.ಪಾಟೀಲ ಉಪಸ್ಥಿತರಿದ್ದರು.

## ಕೊಟ್ರಶೆಟ್ಟಿ ಶಾಲೆಯಲ್ಲಿ ಸ್ವಚ್ಛತಾ ಅಭಿಯಾನ



**ರಬಕವಿ :** ಇಲ್ಲಿಯ ಭಾರತಗ್ಯಾಸ್ ವತಿಯಿಂದ ಜುಲೈ 9 ರಂದು ಡಿ. ಕೆ. ಕೊಟ್ರಶೆಟ್ಟಿ ಶಾಲೆಯಲ್ಲಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ಜರುಗಿತು. ಸ್ವಚ್ಛತಾ ಅಭಿಯಾನ ದೊಂದಿಗೆ ಸ್ವಚ್ಛತಾ ಪ್ರತಿಜ್ಞೆ ಎಲ್ಲ ಮಕ್ಕಳಿಂದ, ಶಿಕ್ಷಕರಿಂದ ಮತ್ತು ಭಾರತಗ್ಯಾಸ್ ಸಿಬ್ಬಂದಿಯಿಂದ ಕೈಗೊಳ್ಳಲಾಯಿತು. ಅದರ ಜೊತೆಗೆ ಶಾಲೆಯ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು.

ಶಾಲೆಯ ಮಕ್ಕಳಿಗೆ ಸ್ವಚ್ಛತಾ ಪ್ರಭಂದ ಏರ್ಪಡಿಸಲಾಗಿತ್ತು.

ಭಾರತಗ್ಯಾಸ ಸಿಬ್ಬಂದಿ ವತಿಯಿಂದ ರಬಕವಿ – ಬನಹಟ್ಟಿ ಮುಖ್ಯರಸ್ತೆಯಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಯಿತು.

# ಎನ್‌ಎಸ್‌ಎಸ್ ಶಿಬಿರ ಉದ್ಘಾಟನೆ



**ಮೂಡಲಗಿ :** ಸಮೀಪದ ತುಕ್ಕಾನಟ್ಟಿಯ ಸರಕಾರಿ ಪ್ರಾಥಮಿಕ ಶಾಲೆಯ ಬಾವಿಕೋಡಿ ತೋಟದಲ್ಲಿ ಕಲ್ಲೋಳಿಯ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯ ಕಲಾ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕದ ಏಳು ದಿನಗಳ ಶಿಬಿರ ಆರಂಭವಾಯಿತು. ಶಿಬಿರವನ್ನು ತುಕ್ಕಾನಟ್ಟಿಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್ ಕೆ ಹುಲಕುಂದ್ ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟಿಸಿದರು,

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಕಾರ್ಯದರ್ಶಿ ಡಾ. ಬೋಜರಾಜ ಬೆಳಕೂಡ ವಹಿಸಿ ಮಾತನಾಡಿ, ಇಂದಿನ ಕಾಲೇಜ್ ಯುವ ಪೀಳಿಗೆಗೆ ಸಮಾಜದ ಕಳಕಳಿ ಹುಟ್ಟಿಸಲು ಇಂತಹ ಎನ್ ಎಸ್ ಎಸ್ ಶಿಬಿರ ಸಹಾಯಕಾರಿಯಾಗಿದೆ ಎಂದರು,

ಪ್ರಾಸ್ತಾವಿಕ ಮಾತನಾಡಿದ ಸಂಸ್ಥೆಯ ಆಡಳಿತಾಧಿಕಾರಿ ಪ್ರಕಾಶ್ ಗರಗಟ್ಟಿ ಪ್ರಸ್ತುತ ಶಿಬಿರದ ವ್ಯವಸ್ಥೆಯು ಪ್ರೌಢಶಾಲೆಯ ಮಟ್ಟದಲ್ಲಿ ಎಸ್ ಯು ಪಿ ಡಬ್ಲ್ಯೂ ಅವಧಿ ಇತ್ತು ಇದರಿಂದ ವಿದ್ಯಾರ್ಥಿಗಳಲ್ಲಿ ಸಮಾಜದ ಕಾರ್ಯಗಳು ಪೂರಕವಾಗಿ ನಡೆಯಲ್ಪಡುತ್ತಿತ್ತು ಎಂದರು,

ಮುಖ್ಯ ಅತಿಥಿಯಾಗಿ ಶಾಲೆಯ ಪ್ರಧಾನ ಗುರುಗಳಾದ ಸಿದ್ಧಾರೂಢ ಹಮ್ಮಿನವರ್, ಲಕ್ಷ್ಮಿ ಕೇಂದ್ರದ ಸತೀಶ್ ಕೌಜಲಗಿ ಆಗಮಿಸಿದ್ದರು,

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಹಾಗೂ ಪ್ರಧಾನ ಗುರುಗಳನ್ನು ಸಂಸ್ಥೆಯ ಪರವಾಗಿ ಶಾಲು ಹೊದಿಸಿ ಸನ್ಮಾನಿಸಲಾಯಿತು,

ಉಪನ್ಯಾಸಕರಾದ ಕು ಮರೇಶಿ ವಿದ್ಯಾ ಬಡಿಗೇರ್, ಅನಿತಾ ಅರಮನೆ, ಶಾಯಿಲ್ ಲಂಗೋಟಿ , ಕೀರ್ತಿ ನುಗ್ಗಾನಟ್ಟಿ, ಲಕ್ಷ್ಮಿ ಕವಡಪ್ಪಗೋಳ ಉಪಸ್ಥಿತರಿದ್ದರು,

ಆರಂಭದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಸಂಗಮೇಶ್ ಹೂಗಾರ್ ಸ್ವಾಗತಿಸಿದರು ಗುರುರಾಜ್ ಕಡಕಬಾವಿ ಕಾರ್ಯನಿರ್ವಹಿಸಿ ಕೊನೆಯಲ್ಲಿ ಉಪನ್ಯಾಸಕಿ ಜ್ಯೋತಿ ಮುತ್ನಾಳ ವಂದಿಸಿದರು.

# ಮರ ಬೆಳಸುವದು, ಸಂರಕ್ಷಿಸುವದು ಅವಶ್ಯವಾಗಿದೆ: ಈರಣ್ಣ ಕಡಾಡಿ

**ಮೂಡಲಗಿ :** ತಂತ್ರಜ್ಞಾನ ಬೆಳೆದಷ್ಟು ನಾವು ಪರಿಸರ ಕಡೆ ಗಮನ ನೀಡುವದನ್ನು ಬಿಟ್ಟಿದ್ದೆವೆ ಆದರೆ ಗಾಳಿ ಹಾಗೂ ಉತ್ತಮ ವಾತಾವರಣ ನಿರ್ಮಾನ ಆಗಬೇಕಾದರೆ ಮರಗಳ ಬೆಳಸುವದು ಗಿಡಗಳನ್ನು ಸಂರಕ್ಷಿಸುವದು ಅವಶ್ಯವಾಗಿದೆ ಎಂದು ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಹೇಳಿದರು,

ಭಾನುವಾರ ಪಶು ಪಾಲನಾ ಇಲಾಖೆಯ ಆವರಣದಲ್ಲಿ ಭಾರತೀಯ ಜನತಾ ಪಕ್ಷ ಮೂಡಲಗಿ ನಗರ ಘಟಕದ ವತಿಯಿಂದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಏಕ ಪೇಡ ಮಾ ಕೆ ನಾಮ ತಾಯಿಗಾಗಿ ಒಂದು ಮರ ವನ ಮಹೋತ್ಸವ ಕಾರ್ಯಕ್ರಮದಲ್ಲಿ ಸಸಿ ನೆಟ್ಟು ಮಾತನಾಡಿದರು,

ಪರಿಸರ ಗಾಳಿ,ನೀರು,ಮಣ್ಣು.ಮರಗಳು ಕಾಡುಗಳು,ಸಾಗರಗಳು ಇತ್ಯಾದಿಗಳು ಎಂದೆಂದಿಗೂ ಉಳಿಯುವದು ಬಹಳ ಮುಖ್ಯ ನಾವು ಅವಲಂಬಿತರಾಗಿರುವ ಈ ಪರಿಸರ ಯುಗ ಯುಗಗಳವರೆಗೂ ಹೀಗೆಯೇ ಉಳಿಯಬೇಕಿದೆ ಬೇಸರವೆಂದರೆ ನಾವು ಮಾಡುತ್ತಿರುವ ಅರಣ್ಯನಾಶ ಗಣಿಗಾರಿಕೆ,ಕೈಗಾರಿಕರಣ



ಸೇರಿದಂತೆ ಹಲವಾರು ಮಾನವ ಚಟುವಟಿಕೆಗಳಿಂದ ಪರಿಸರವು ಇಂದು ಬಹಳ ಹಾನಿಗೊಳಗಾಗುತ್ತಿದೆ ಎಂದರು,

ಹಿಂದಿನ ಕಾಲದಲ್ಲಿ ಮನೆಯ ಸುತ್ತಮುತ್ತ ವಿವಿದ ಹಣ್ಣಿನ ಗಿಡಗಳನ್ನು ಬೆಳಸುವ ಪದ್ಧತಿ ಇದ್ದು ಮಾಯವಾಗಿದೆ. ಐದು ಮರ ನೆಟ್ಟು ಅದರಲ್ಲಿ ಕನಿಷ್ಟ ಮೂರು ಗಿಡಗಳು ಹೆಮ್ಮರವಾಗಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು. ಪ್ರತಿವರ್ಷ 143ಕ್ಕೂ ಹೆಚ್ಚು ದೇಶಗಳು ಜೂನ 5 ಪರಿಸರ ದಿನಾಚರಣೆ ದಿನದಲ್ಲಿ ಭಾಗಿಯಾಗುತ್ತವೆ. ಪ್ರತಿ ವರ್ಷ ವಿಶ್ವ ಪರಿಸರ ದಿನವನ್ನು ವಿವಿಧ ಹೆಸರಿನಲ್ಲಿ ಆಚರಿಸಲಾಗುತ್ತದೆ. ಪ್ರಮುಖ ಸಂಸ್ಥೆಗಳು, ಸಂಘಗಳು ಸಮುದಾಯಗಳು, ಉಬಯ ಸರ್ಕಾರಗಳು ವಿಶ್ವಾದ್ಯಂತ ಪರಿಸರ ದಿನವನ್ನು ವಿವಿಧ ರೀತಿಯಲ್ಲಿ ಆಚರಿಸುತ್ತವೆ ಎಂದರು,

ಅರಣ್ಯ ಇಲಾಖೆಯ ಮೂಡಲಗಿ ಬಿಟ್ ಅಧಿಕಾರಿ ಮಂಹಾತೇಶ ಹಿಪ್ಪರಗಿ ಮಾತನಾಡಿ, ಜೂನ 5 ಪರಿಸರ ದಿನಾಚರಣೆ ಅಲ್ಲಾ. ಪ್ರತಿ ದಿನ ಪರಿಸರ ದಿನಾಚರಣೆಯೇ. ದೈನಂದಿನ ಬದುಕಿನಲ್ಲಿ ಅರಣ್ಯ ಆರೋಗ್ಯ ಶಿಕ್ಷಣ ಈ ಮೂರು ವಿಷಯಗಳ ಬಗ್ಗೆ ನಾವು ಹೆಚ್ಚು ಗಮನಹರಿಸಬೇಕು, ಮರಗಳನ್ನು ಬೆಳಸದಿದ್ದರೆ ಮುಂದೆ ಆಕ್ಸಿಜನ್ ಬಾಟಲ್ ಮಕ್ಕಳ ಕೈ ಕೊಡಬೇಕಾಗಿದೆ.ರೈತ ತಮ್ಮ ಜಮೀನ ಬದುವಿನಲ್ಲಿ ಸಾಗವಾಣಿ.ತೇಗು. ಕಾಡಬೇವು. ಮರಗಳನ್ನು ಬೆಳೆಸಿದ ರೈತರಿಗೆ ಪ್ರತಿ ವರ್ಷ ಪ್ರೋತ್ಸಾಹ ಧನವನ್ನು ಸರ್ಕಾರ ನೀಡುತ್ತದೆ ಗಾಳಿ.ಜಲ.ಭೂಮಿ ಇವಗಳ ರಕ್ಷಣೆ ಮರಗಳಿಂದ ಮಾತ್ರ ಸಾಧ್ಯ ಎಂದರು,

ಪಶು ಪಾಲನಾ ಸಹಾಯಕ ನಿರ್ದೇಶಕ ಡಾ ಮೋಹನ ಕಮತ, ಪಾಲಿ ಕೀನಿಕ್ ಸಹಾಯಕ ನಿರ್ದೇಶಕ ಡಾ ಎಮ್ ಬಿ ವಿಭೂತಿ, ಅರಣ್ಯ ಇಲಾಖೆ ಅಧಿಕಾರಿಗಳು, ಮುಂಖಡರಾದ ಪ್ರಕಾಶ ಮಾದರ, ನಿಂಗಪ್ಪ ಪಿರೋಜಿ, ಶಿವಬಸು ಹಂದಿಗುಂದ, ಮಲ್ಲಪ್ಪ ಮದಗುಣಕಿ, ಡಾ ಬಿ ಎಮ್ ಪಾಲಭಾಂವಿ, ಬಸವರಾಜ ಪಾಟೀಲ್, ಚನ್ನಪ್ಪ ಅಥಣಿ, ಈಶ್ವರ ಮುರಗೋಡ, ಯುವ ಜನ ಸೇವಾ ಸಂಘದ ಅಧ್ಯಕ್ಷ ಈರಪ್ಪ ಡವಳೇಶ್ವರ ಉಪಸ್ಥಿತರಿದ್ದರು,

# ಕೇಂದ್ರ ಶಿಕ್ಷಣ ಮಂತ್ರಿ ರಾಜೀನಾಮೆಗೆ ಒತ್ತಾಯಿಸಿ ಸಿಪಿಐ(ಎಂ) ಬೃಹತ್ ಪ್ರತಿಭಟನೆ




**ಕೊಪ್ಪಳ :** ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ ಎನ್‌ಟಿಎ ನಡೆಸಿದ ಪರೀಕ್ಷೆಗಳಲ್ಲಿ ಹಗರಣಗಳು ಕಂಡುಬಂದಿರುವುದರಿಂದಶಿಕ್ಷಣಮಂತ್ರಿಧರ್ಮೇಂದ್ರ ಪ್ರಧಾನ ರವರು ನೈತಿಕ ಹೊಣೆ ಹೊತ್ತುರಾಜೀನಾಮೆ ನೀಡಬೇಕೆಂದು ಒತಾಯಿಸಿ ವಿವಿಧ ಕೇಂದ್ರದ ಜನ ವಿರೋಧಿ ನೀತಿಯನ್ನು ಖಂಡಿಸಿ ಕೊಪ್ಪಳದಲ್ಲಿ ಸಿಪಿಐಎಂ ಪಕ್ಷ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿದರು.

ಎನ್‌ಟಿಎಯನ್ನು ವಿಸರ್ಜಿಸಬೇಕು ಅಮಾಯಕ ಮುಸ್ಲಿಮರ ಮೇಲೆ ದಾಖಲಿಸಿದ ಸುಳ್ಳು ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಬೇಕು ಕರಾಳ ಕಾನೂನನ್ನು ವಾಪಸ್ ಪಡೆಯಬೇಕು ಎಂದು ಸಿಪಿಐಎಂ ಪಕ್ಷದ ಮುಖಂಡರು ಪ್ರತಿಭಟನೆಯಲ್ಲಿ ಒತ್ತಾಯಿಸಿದರು.

ಪ್ರಜಾಪ್ರಭುತ್ವದ ವಿರೋಧಿ ಕಾನೂನುಗಳನ್ನು ಕೂಡಲೇ ಕೈಬಿಡಬೇಕು ಎಂದು ಒತ್ತಾಯಿಸಿದರು.

ಬೃಹತ್ ಪ್ರತಿಭಟನೆಯಲ್ಲಿ ಪಕ್ಷದ ಮುಖಂಡರಾದ ಸುಂಕಪ್ಪ ಗದಗ್ ನಿರುಪಾದಿ ಬೆಣಕಲ್ ಹುಸೇನಪ್ಪ ಹನುಮೇಶ್ ಕಲ್ಮಂಗಿ ಮಂಜುನಾಥ್ ಡಗ್ಗಿ ಫಕೀರಮ್ಮ ಕೃಷ್ಣಪ್ಪ ಅಮರಮ್ಮ ಗದಗ್ ಹುಸೇನ್ ಸಾಬ್ ನದಾಫ್ ರಾಮಣ್ಣ ದೊಡ್ಡಮನಿ ರೇಣುಕಮ್ಮ ಭೀಮನೂರ್ ಶಾಂತಮ್ಮ ಬೆಂಗಳೂರು ಮನಿ ಸುಂಕಮ್ಮ ಕುಕನೂರ್ ಸಂಜೀವಮ್ಮ ರಂಗಪ್ಪ ಅನೇಕರು ಪಾಲ್ಗೊಂಡಿದ್ದರು.

# ಹಸಿರು, ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ: ಕಡಾಡಿ

**ಮೂಡಲಗಿ :** ಹಸಿರು, ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಪರಿಸರ ವ್ಯವಸ್ಥೆಯಲ್ಲಿ ಮರಗಳು ಅಂತಹ ಪ್ರಮುಖ ಭಾಗವಾಗಿರುವುದರಿಂದ, ಆರೋಗ್ಯಕರ, ಮಾಲಿನ್ಯ-ಮುಕ್ತ ಪರಿಸರಕ್ಕಾಗಿ ಮರಗಳನ್ನು ಮತ್ತು ಗೀಡಗಳ ಸಂರಕ್ಷಿಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿದೆ ಎಂದು ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಹೇಳಿದರು

ರವಿವಾರ ಯುವ ಜೀವನ ಸೇವಾ ಸಂಸ್ಥೆ ಹಾಗೂ ಅರಣ್ಯ ಇಲಾಖೆ ಸಹಯೋಗದಲ್ಲಿ ಪಶು ಪಾಲನಾ ಇಲಾಖೆಯ ಆವರಣದಲ್ಲಿ ಸಸಿ ನೆಟ್ಟು ನೀರುಣಿಸಿ ಮಾತನಾಡಿದರು, ನಗರೀಕರಣ ಮತ್ತು ಕೈಗಾರಿಕೀಕರಣದಿಂದಾಗಿ, ಪ್ರತಿದಿನ ಹೆಚ್ಚು ಹೆಚ್ಚು ಮರಗಳನ್ನು ಕತ್ತರಿಸಲಾಗುತ್ತದೆ. ಅರಣ್ಯನಾಶವು ಉದಯೋನ್ಮುಖ ಕಳವಳವಾಗಿದೆ,

ಕಳೆದಎರಡುವರ್ಷದಹಿಂದೆಪ್ರಪಂಚವನ್ನೆಕಾಡಿದಕರೋನಾ ಮಾಹಾ ಮಾರಿಯ ಸಮಯದಲ್ಲಿ ಆಕ್ಸಿಜನ್‌ಕೊರತೆಯಿಂದಅದೇಷ್ಟೂ ಜೀವಗಳು ತಮ್ಮ ಪ್ರಾಣವನ್ನು ಕಳೆದುಕೊಂಡಿವೇ ಕೇಂದ್ರ ಸರ್ಕಾರ ಪ್ರತಿತಾಲೂಕಿನಲ್ಲಿಯೋಆಕ್ಷಿಜನ್ ಘಟಕಗಳನ್ನು ಸ್ಥಾಪಿಸಿ ಜನರಪ್ರಾಣವನ್ನುಉಳಿಸಿತು,ಪ್ರಸ್ತುತವರ್ಷದಲ್ಲಿದೆಹಲಿಯಲ್ಲಿ ಬಿಸಿಲಿನ ತಾಪದಿಂದಜನರು ಪ್ರಾಣ ಬಿಟ್ಟರುಇದರಿಂದ ನಾವು ಪರಿಸರದರಕ್ಷಣೆಯ ಪಣತೋಡಬೇಕಾಗಿದೆ ಸಾಲು ಸಾಲು ಮರಗಳನ್ನು ನೆಡಬೇಕು ಮತ್ತು ಸಂರಕ್ಷಸಿಬೇಕು ಎಂದರು,

ಯುವಜನ ಸೇವಾ ಸಂಘದಅಧ್ಯಕ್ಷಈರಪ್ಪ



ಡವಳೇಶ್ವರ ಹಾಗೂ ಸಂಘದ ಸದಸ್ಯರುರಾಜ್ಯ ಸಭಾ ಸದಸ್ಯಈರಣ್ಣಕಡಾಡಿಅವರನ್ನು ಸನ್ಮಾನಿಸಿದರು,

ವನ ಮಹೋತ್ಸವಕಾರ್ಯಕ್ರಮದಲ್ಲಿಪಶು ಪಾಲನಾ ಸಹಾಯಕ ನಿರ್ದೇಶಕಡಾ ಮೋಹನ ಕಮತ, ಪಾಲಿ ಕ್ಲಿನಿಕ್ ಸಹಾಯಕ ನಿರ್ದೇಶಕಡಾಎಮ್ ಬಿ ವಿಭೂತಿ, ಪಶು ಪರಿವಿಕ್ಷಕರಾದಶಂಕರಶಾಬ್ಬನವರ,ಮಹಾಂತೇಶಹೊಸೂರ, ಆದಪ್ಪಗೋಳ, ಕೌಜಲಗಿಅರಣ್ಯ ಇಲಾಖೆ ಅಧಿಕಾರಿಗಳು, ವಸತಿ ನಿಲಯದ ಮೇಲ್ವಿಚಾರಕಯಲಪ್ಪ ಭಜಂತ್ರಿ, ವಿವಿಧ ಪಕ್ಷಗಳ ಮುಖಂಡರಾದಮಲ್ಲಪ್ಪ ಮದಗುಣಕಿ, ನಿಂಗಪ್ಪ ಪಿರೋಜಿ, ಚನ್ನಪ್ಪಅಥಣಿ,ಡಾ ಬಿ ಎಮ್ ಪಾಲಭಾಂವಿ, ಈಶ್ವರ ಮುರಗೋಡ, ಶಿವಬಸು ಹಂದಿಗುಂದ, ಬಸವರಾಜ ಪಾಟೀಲ್, ಪ್ರಕಾಶ ಮಾದರ,ಪುರಸಭೆ ಸದಸ್ಯರು, ಮಂಜುನಾಥ ಸೈನಿಕ ತರಬೇತಿ ಸಂಸ್ಥೆಯವಿಧ್ಯಾರ್ಥಿಗಳು, ಮೆಟ್ರಿಕನಂತರದ ಬಾಲಕರ ವಸತಿ ನಿಲಯದ ವಿಧ್ಯಾರ್ಥಿಗಳು ಉಪಸ್ಥಿತರಿದ್ದರು,ಗುರುನಾಥಗಂಗನ್ನವರ ಸ್ವಾಗತಿಸಿದರು, ವಿರು ವನಸನ್ನಿ ವಂದಿಸಿದರು.

# ಬೌದ್ಧ ಧರ್ಮ ಸನಾತನ ಧರ್ಮಕ್ಕೆ ನಿಕಟವಾಗಿದೆ: ಡಾ. ಗಣೇಶ

**ಜಮಖಂಡಿ :** ಬುದ್ಧನ ತತ್ವಗಳು ಯಾವುದೇ ಧರ್ಮ, ಸಮಾಜವನ್ನು ವಿರೋಧಿಸುವ ತತ್ವವಲ್ಲ. ನಮ್ಮಲ್ಲಿರುವ ಆತ್ಮವನ್ನು ಜಾಗೃತಗೊಳಿಸಿದರೆ ಜ್ಞಾನ ಒಲಿಯುವುದು. ಬೌದ್ಧ ಧರ್ಮ ಸನಾತನದಧರ್ಮಕ್ಕೆನಿಕಟವಾಗಿದೆ ಎಂದು ಬೆಂಗಳೂರಿನ ವಿದ್ವಾಂಸ ಶತಾವಧಾನಿ ಡಾ.ಆರ್.ಗಣೇಶ ಹೇಳಿದರು.

ತಾಲೂಕಿನ ಕಲ್ಲಹಳ್ಳಿ ಗ್ರಾಮದಲ್ಲಿ ರವಿವಾರ ಸುಮ್ಮನೆ ಸತ್ಯಕಾಮರ ತೋಟದ ಮನೆಯಲ್ಲಿ ಸತ್ಯಕಾಮ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಸತ್ಯಕಾಮರ ಜನ್ಮಾರಾಧನೆ ನಿಮಿತ್ತ ಬುದ್ದದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಬುದ್ಧನು ಶೂನ್ಯವಾದಿಯಲ್ಲ ಮಹಾ ಆನಂದವಾದಿಯಾಗಿದ್ದ. ಎಲ್ಲರನ್ನುಗೌರವಿಸಿ ಸಮಾನವಾಗಿ ಕಾಣುತ್ತಿದ್ದ. ಬುದ್ಧ ಉಪದೇಶ ಮಾಡಿದ್ದೂ ಕೂಡಾ ಪೌರ್ಣಮಿ ದಿನಹೀಗಾಗಿಬುದ್ಧಹೇಗೆಸನಾತನ ವಿರೋಧಿ ಆಗುಗ್ತಾನೆ. ಇಂದಿನ ಕಾಲದ ಕಮ್ಯುನಿಸ್ಟರು ಬುದ್ದನ ತತ್ವಗಳನ್ನು ತಮಗೆ ಬೇಕಾದ ರೀತಿಯಲ್ಲಿ ತಿರುಚಿಕೊಳ್ಳುತ್ತಿದ್ದಾರೆ



ಎಂದರು.

ಸುವರ್ಣ ನ್ಯೂಸ್ ಅಜೀತ ಹಣಮಕ್ಕನವರ ಮಾತನಾಡಿ, ಬುದ್ಧ ಎಂದರೆ ಬೆಳಕು ಆತನ ಜ್ಞಾನ, ತತ್ವಗಳನ್ನು ಸರಿಯಾಗಿ ಅಳವಡಿಸಿಕೊಳ್ಳದೇ ಸಮಾಜದ ದಾರಿ ತಪ್ಪಿಸುವ ಕೆಲಸ ನಡೆಯುತ್ತಿದೆ. ಗುರು ಎಂದರೆ ಹೆಗಲ ಮೇಲೆ ಹೊತ್ತುಕೊಂಡು ಹೋಗುವಂತಾಗಬಾರದು ಹೊರತು ಇಳಿಸಿ ನಾವು ಮುಂದೆ ಸಾಗಬೇಕು ಎಂಬ ಸತ್ಯಕಾಮರು ಬರೆದ ಸಾಲನ್ನು ಅಂದು ನನಗೆ ರವಿ ಬೆಳೆಗೆರೆ ತಿಳಿಸಿಕೊಟ್ಟದರಿಂದ ಜೀವನ ಮೌಲ್ಯ ಅರಿತು ಬದಕುತ್ತಿದ್ದೇನೆ. ಜೀವನದಲ್ಲಿ ಯಾವುದೇ ಕೆಲಸವಾದರು ಶೇ.100 ಪರಿಶ್ರಮವಿರಬೇಕು. ಶಾಲಾ ಪಠ್ಯಪುಸ್ತಕದಲ್ಲಿರುವ ವಿಷಯವನ್ನು ಪುಣ್ಯಕ್ಕೆ ನಾವು ಪರೀಕ್ಷೆಗಾಗಿ ಓದಿ ಬಿಡುತ್ತೇವೆ ಅದನ್ನೇ ಮನಸ್ಸಿನ ಮೇಲೆ ತಗೆದುಕೊಂಡು ಗಂಭೀರವಾಗಿ ಓದಿದ್ದರೆ ನಮ್ಮ ದೇಶದ ಗತಿ ಅಧೋಗತಿ ಆಗುತ್ತಿತ್ತು ಎಂದರು.

ಉಡಪಿಯ ಪತ್ರಕರ್ತ ಶ್ರೀಕಾಂತ ಶೆಟ್ಟಿ ಮಾತನಾಡಿ, ಜ್ಞಾನ ಎಂಬುದು ಬಹಿರ್ಮುಖಿಯಲ್ಲ ಅಂತರ್ಮುಖಿ. ಬುದ್ಧ ಎಂದಿಗೂ ಪ್ರತಿಮೆ ಸ್ಥಾಪಿಸಿ, ಪೂಜಿಸಿ, ಪಂತ ಮಾಡಿಕೊಂಡು ವೈದಿಕ ಸಂಸ್ಕೃತಿಯನ್ನು ಅಳಿಸುವಂತೆ ಹೇಳಿಲ್ಲ. ಇಂದಿನ ನವಬುದ್ದರು ತತ್ವಗಳನ್ನು ತಿಳುಕೊಳ್ಳದೆ ಸಮಾಜವನ್ನು ವಿರುದ್ಧ ದಿಕ್ಕಿನಲ್ಲಿ ಎತ್ತಿಕಟ್ಟಿ ಭಾರತದ ವೈದಿಕ ಸಂಸ್ಕೃತಿಗಳ ವಿರುದ್ಧ ಕೆಲವು ಸಂಚುಗಳುನಡೆಯುತ್ತಿವೆ.ಬುದ್ಧನ ಹೆಸರಲ್ಲಿ ಹಿಂದು ಸಮಾಜವನ್ನು ಹಿತ್ತಿಕ್ಕುವ ಕೆಲಸ ನಡೆದಿದೆ. ಬುದ್ದನ ಸ್ವರೂಪವನ್ನು ತೋರಿಸುವ ಕೆಲಸ ಈ ಕಾರ್ಯಕ್ರಮದಿಂದ ಆಗುತ್ತಿದೆ ಎಂದರು.

ಶಿಕ್ಷಣತಜ್ಞ ಡಾ.ಗುರುರಾಜ ಕರಜಗಿ ಮಾತನಾಡಿ, ಒಬ್ಬರ ಯಶಸ್ವಿಗೆ ಹಲವಾರು ಕೈಗಳ ಪರಿಶ್ರಮವಿರುತ್ತದೆ ಹಾಗೆ ಬುದ್ದನ ಜೀವನದಲ್ಲಿ ಆತ್ಮಸಂಗಾತಿ ಯಶೋಧರೆಪಾತ್ರಮುಖ್ಯವಾಗಿದೆ. ಸಿದ್ದಾರ್ಥ ಎಲ್ಲ ತೊರೆದು ಬುದ್ದನಾಗಲು ಹೊರಟಾಗ ಅದರಿಂದ ಯಶೋಧರೆಗೆ ಆದ ನೋವು, ಸಂಕಟ, ಕಷ್ಟಗಳನ್ನು ಸಹಿಸಿಕೊಂಡು ಒಬ್ಬ ಮಗನಾಗಿ ಮನೆನಡೆಸಿ,ಮಗನಿಗೆತಂದೆಯಾಗಿ ನಿಂತು ಜೀವನ ನಡೆಸಿ ಕೊನೆಗೆ ತಾನು ಬುದ್ದಸಂಘದಲ್ಲಿ ಅರ್ಹತಾ ಸನ್ಯಾಸತ್ವ ಪಡೆದುಕೊಂಡು ಕೊನೆಗೆ ಅಸುನೀಗಿದಳು ಎಂದರು.

ವೇದಿಕೆಯಲ್ಲಿ ವೀಣಾ ಬನ್ನಂಜೆ ಸಹಿತ ಹಲವರು ಇದ್ದರು.

# ಅಂತರಕಾಲೇಜ ಚದುರಂಗ ಸ್ಪರ್ಧೆಯಲ್ಲಿ ಮಂಗಳೂರ-ಬೆಳಗಾವಿ ಪ್ರಥಮ
# ಮಾನಸಿಕ ವೃದ್ಧಿಗೆ ಚದುರಂಗ ಕ್ರೀಡೆ ಸಹಕಾರಿ: ಕೊಟ್ನಾಳ

**ಜಮಖಂಡಿ :** ವಿದ್ಯಾರ್ಥಿಗಳು ತಮ್ಮ ಬಿಡುವಿನ ವೇಳೆಯಲ್ಲಿ ಚದುರಂಗ ಕ್ರೀಡೆಗಳಲ್ಲಿ ತೊಡಗಿಕೊಂಡು ತಮ್ಮ ಮಾನಸಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಮಾನಸಿಕ ವೃದ್ದಿಗೆ ಚದುರಂಗ ಕ್ರೀಡೆಯು ಸಹಕಾರಿಯಾಗಿದೆ ಎಂದು ಬಿ.ಎಲ್.ಡಿ.ಸಂಸ್ಥೆ ಮುಖ್ಯ ಆಡಳಿತಾಧಿಕಾರಿ ಡಾ.ಆರ್.ಬಿ.ಕೊಟ್ನಾಳ ಹೇಳಿದರು.

ನಗರದ ಬಿ.ಎಲ್.ಡಿ. ಸಂಸ್ಥೆಯ ದರ್ಬಾರ ಹಾಲದಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಹಾಗೂ ಬಿ.ಎಲ್.ಡಿ ಸಂಸ್ಥೆ ಕಾನೂನು ಕಾಲೇಜು ಸಹಯೋಗದಲ್ಲಿ ಕಾನೂನು ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಅಂತರಕಾಲೇಜು ಮಟ್ಟದ ಚೆಸ್ ಟೂರ್ನಾಮೆಂಟನ್ನು ಉದ್ಘಾಟಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಅರುಣಕುಮಾರ ಶಹಾ ಮಾತನಾಡಿ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಂತರಕಾಲೇಜು ಮಟ್ಟದ ಚೆಸ್ ಸ್ಪರ್ಧೆಯನ್ನು ಆಯೋಜಿಸು ಅವಕಾಶ ನೀಡಿದ್ದಕ್ಕಾಗಿ ಅಭಿನಂದಿಸಿದರು.

ವೇದಿಕೆಯಲ್ಲಿ ಆಡಳಿತಾಧಿಕಾರಿ ಪ್ರೊ.ಶ್ರೀಕಾಂತ ಲಗಳಿ, ದೈಹಿಕ ನಿರ್ದೇಶಕ ಡಾ.ಖಾಲಿದಖಾನ, ದೈಹಿಕನಿರ್ದೇಶಕ ಡಾ.ಕೆ,ಎಂ.ಶಿರಹಟ್ಟಿ ಸಹಿತ ಹಲವರು ಇದ್ದರು. ಲಕ್ಮೀ ದೊಡಮನಿ ಪ್ರಾರ್ಥಿಸಿದರು. ಪ್ರಾಚಾರ್ಯ ಡಾ.ಆರ್.ಜಿ. ಕುಲಕರ್ಣಿ ಸ್ವಾಗತಿಸಿದರು. ಉಪನ್ಯಾಸಕ ರಾಜಶೇಖರ ಹೊಸಟ್ಟಿ ನಿರೂಪಿಸಿದರು. ದೈಹಿಕ ನಿರ್ದೇಶಕ ಡಾ.ಕೆ.ಎಂ. ಶಿರಹಟ್ಟಿ ವಂದಿಸಿದರು.

**ಫಲಿತಾಂಶ :** ಪುರುಷರ ವಿಭಾಗದಲ್ಲಿ ಎಸ್.ಡಿ.ಎಂ..ಕಾನೂನು ಕಾಲೇಜ ಮಂಗಳೂರು (ಪ್ರಥಮ), ರಾಮಯ್ಯ ಕಾನೂನು ಕಾಲೇಜ ಬೆಂಗಳೂರು (ದ್ವಿತೀಯ),ವೈಕುಂಠಬಾಳಿಗಾ ಕಾನೂನು ಕಾಲೇಜ ಉಡುಪಿ (ತೃತೀಯ),



ಕ್ರಿಸ್ತ ಕಾನೂನು ಕಾಲೇಜ ಬೆಂಗಳೂರು ಚತುರ್ಥ ಸ್ಥಾನ ಪಡೆಯಿತು. ಮಹಿಳೆಯರ ವಿಭಾಗದಲ್ಲಿ ಆರ್.ಎಲ್.ಲಾ ಕಾಲೇಜ ಬೆಳಗಾವಿ (ಪ್ರಥಮ), ರಾಮಯ್ಯ ಕಾನೂನು ಕಾಲೇಜ ಬೆಂಗಳೂರು (ದ್ವಿತೀಯ), ಎಸ್.ಡಿ.ಎಂ. ಕಾನೂನು ಕಾಲೇಜ ಮಂಗಳೂರು (ತೃತೀಯ), ಕೆಎಸ್.ಎಲ್.ಯು. ಕಾನೂನು ಕಾಲೇಜ ಹುಬ್ಬಳ್ಳಿ ಚತುರ್ಥ ಸ್ಥಾನ ಪಡೆಯಿತು.

ಪಾರಿತೋಷಕ ವಿತರಣಾ ಸಮಾರಂಭದಲ್ಲಿ ಡಾ.ಖಾಲಿದಖಾನ, ಹಿರಿಯನ್ಯಾಯವಾದಿವಿ.ವಿ.ತುಳಸಿಗೇರಿಪ್ರಾಚಾರ್ಯಡಾ.ಆರ್.ಜಿ.ಕುಲಕರ್ಣಿ, ದೈಹಿಕನಿರ್ದೇಶಕ ಡಾ.ಕೆ.ಎಂ.ಶಿರಹಟ್ಟಿ, ಉಪನ್ಯಾಸಕರಾದ ಸುಖದೇವ ಗಸ್ತಿ, ನಿಖಿಲ ಮಂಟೂರ, ಸುರೇಶ ಕೋಳಿಗುಡ್ಡ, ಹಣುಮಂತ ಸಲಗರ, ಡಾ.ಶ್ರೀದೇವಿ ಸುವರ್ಣಖಂಡಿ ಸಹಿತ ಹಲವರು ಇದ್ದರು.

# ಜನಪದರ ಮಳೆ ಆಚರಣೆಗಳು
# ಹಿಂಡುರಾಜರ ಗಂಡ, ಪುಂಡ ಮಳೆರಾಜ

ಸಮೃದ್ಧಿಯ ಸಂಕೇತ, ಮಳೆ ಇಲ್ಲದಿರೆ ಬದುಕಿಗೇನು ಅರ್ಥ, ಭೂಮಿ ತಾಯಿಯ ಹಸಿರಿಗೆ, ಜಗದ ಉಸಿರಿಗೆ ಮಳೆ ಬೇಕು. ಮಳೆ ನಮ್ಮ ರೈತಾಪಿ ಜನಗಳ ಅಪ್ಪಟ ಸಂಗಾತಿ. ಮಳೆ ಮತ್ತು ಮಣ್ಣು ಅವರ ಪರಮ ಆಪ್ತ. ಮಳೆಗಾಗಿ ಪ್ರಾರ್ಥಿಸುವ, ಬೆಳೆಗಾಗಿ ಬೇಡಿಕೊಳ್ಳುವ ಬಗೆಯಲ್ಲಿ ವೈವಿಧ್ಯತೆಯು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಆದರೆ ಪ್ರಕೃತಿಯ ಶಿಶುವಾಗಿರುವ ನಮ್ಮ ಒಕ್ಕಲು ಮಕ್ಕಳಿಗೆ ಮಳೆಯೇ ಒಟ್ಟು ಬದುಕಿನ ಬಿಡದ ನಂಟಿನ ಸಂಗಾತಿ.ಮಳೆಗಾಗಿ ಅನೇಕ ಆಚರಣೆಗಳು,ದೈವಿ ನಂಬುಗೆಗಳು ನಡೆದುಕೊಂಡು ಬಂದಿವೆ.ಜನಪದರು ದೇವರಿಗೆ 'ನನ್ನ ನೀರಾಗ ನಿಂದಿಸಿದರ ನಿನ್ನ ಊರಾಗ ನಿಂದರಿಸತಿನಿ' ಎಂದು ಪ್ರಾರ್ಥಿಸುತ್ತಾರೆ.

ಆಚರಣೆಯಲ್ಲಿ ಪ್ರಧಾನವಾಗಿ ನಂಬಿಕೆ,ನಿಷ್ಠೆ,ಭಕ್ತಿ ಮುಖ್ಯ.ಆಧುನಿಕರಿಗೆ ಜನಪದರ ನಂಬಿಕೆ,ಆಚರಣೆಗಳು ಮೌಢ್ಯವಾಗಿ ಕಾಣಬಹುದು,ಆದರೆ ಅವರ ಅಪ್ಪಟ ಮುಗ್ದತೆಯೂ ನಂಬುಗೆಯ ಸತ್ಯವನ್ನು ಹುಸಿ ಮಾಡದೇ ಬದುಕಿನ ಜೀವ ಚೇತನಕ್ಕೆ ಸಾಕ್ಷಿಯಾದುದು ನಮ್ಮ ಕಣ್ಣು ಮುಂದಿದೆ.ಕುಂಬಾರ ಗಾಲಿ ಬೀಸಿದರೆ,ಕಪ್ಪೆಗಳು ಒಟ್ಟುಗೂಡಿದ್ದರೆ, ಆಕಾಶದಲ್ಲಿ ಮಳೆಹುಳುಗಳು ಹಿಂಡು ಹಿಂಡು ಬಂದು ಆಟವಾಡಿದರೆ,ತತ್ತಿ ಹೊತ್ತ ಇರುವೆಗಳು ಗೂಡಿನಿಂದ ಹೊರಗೆ ಬಂದರೆ ಮಳೆ ಬರುತ್ತದೆ ಎಂದು ಪ್ರಕೃತಿಯ ವೈಚಿತ್ರಗಳಿಗೆ ಮಳೆ ಆಗಮನದ ಸಂಕೇತವನ್ನು ಸಾರುತ್ತಾರೆ.

ಮಳೆಗಳಿಗೆ ಒಂದೊಂದು ಹೆಸರುಗಳಿವೆ.ಆ ಮಳೆಗಳ ಭರವಸೆಯ ಮೇಲೆ ಉತ್ತುವುದು,ಬಿತ್ತುವುದು, ರಾಶಿ ಮಾಡುವುದು,ಮನೆಗೆ ಕಾಳುಕಡಿ ತರುವುದನ್ನು ಮಾಡುತ್ತಾರೆ.ಪ್ರತಿ ಮಳೆಗೂ ನಂಬುಗೆ ಆಚರಣೆಗಳಿವೆ.ಶೇಂಗಾ ಹಾಕಾಕ ಮಗಿ ಮಳಿ ಪಾಡಾ, ಜ್ವಾಳಾ ಬಿತ್ತಾಕ ಉತ್ರಿ ಮಳಿ ಪಾಡಾ. ಆರಿದ್ರಾ ಮಳಿಗಿ ಮೆಣಸಿನಗಿಡಾ ಹಚ್ಚಿದರ ಆರು ಕಾಯಿ ಹೆಚ್ಚಾಗತಾವ, ರೋಣಿ ಮಳಿಗೆ ಜ್ವಾಳಾ ಬಿತ್ತಿದರ ಓಣಿ ತುಂಬಾ ಕಾಳು,ಮಳೆಗೆ ಸಂಬಂಧಿಸಿದಂತೆ ಅನೇಕ ಗಾದೆಗಳು ಜನಪದರಲ್ಲಿ ಹರಿದಾಡುತ್ತವೆ.ಮೃಗಶಿರ ಹುಯ್ಯಲು ಮುದಿ ಎತ್ತು ಗರ್ಜಿಸಿತು,ಧರಣಿ ಮಳೆ ಬಂದ್ರೆ ಧರಣಿಯೆಲ್ಲ ಬೆಳೆ, ರೋಣಿ ಮಳೆಯಾದ್ರೆ ಓಣಿಯೆಲ್ಲಾ ಕಾಳು, ಮೃಗಸಿರ ಮಿಂಚಬಾರದು,ಆರಿದ್ರಾ ಗುಡಗಬಾರದು, ಸ್ವಾತಿ ಮಳಿಯಾದ ಮ್ಯಾಲ ಯಾತರ



ಮಳಿ,ಆದರೆ ಉತ್ತರಿ, ಆಗದಿದ್ದರ ಕತ್ತರಿ, ವಿಶಾಖಾ ಮಳೆ ಪಿಶಾಚಿ ಹಿಡಿದ ಹಾಗೆ,ಮಳೆ ಬಂದ್ರ ಕೇಡಲ್ಲ, ಮಗ ಉಂಡ್ರ ಕೇಡಲ್ಲ.ಮಳೆ ಬಂದ ದಿನ ಬೆಳೆಯ ಮೋರೆ ನೋಡು,ಅಳಿಯ ಬಂದ ದಿನ ಮಗಳ ಮೋರೆ ನೋಡು. ಇಂಥ ಗಾದೆಗಳು ತುಂಬಾ ಕುತೂಹಲದಿಂದ ಕೂಡಿವೆ.

ಮಳೆ ಕೇವಲ ಉತ್ತಿ ಬಿತ್ತಿ ಬೆಳೆ ತೆಗೆಯಲು ಬೇಕಾದ ನೀರಲ್ಲ,ಅದು ಸಕಲ ಚೇತನಗಳ ಜೀವನಾಡಿ,ಗಿಡಮರ ಪ್ರಾಣಿ ಪಕ್ಷಿ ಆಹಾರ ವಿಹಾರ ಊಟ ನೋಟ ಎಲ್ಲವುಗಳ ನಿತ್ಯ ನಿರಂತರ ಸಂತೃಪ್ತಿಗೆ ಮಳೆಯೇ ಪ್ರಧಾನ.ಬೇಕಾದಾಗ ಮಳೆ ಬರಿಸುವ, ಬೇಡವಾದಾಗ ಮಳೆ ಕಳಿಸುವ ಕಾರಣಿಕ ಪುರುಷರು ನಮ್ಮಲ್ಲಿ ಹಿಂದೆ ಇದ್ದರಂತೆ.ಮಳೆ ತರಿಸುವ ಮಠ ಬಾಗಲಕೋಟೆ ಬಳಿಯ ಮುರನಾಳ ಮಳೆರಾಜೇಂದ್ರಮಠವಿದೆ ಮಳೆಗಾಗಿ ಅನೇಕ ಸಂಪ್ರದಾಯಗಳಿವೆ. ಮಂಡ್ಯಜಿಲ್ಲೆಯ ಸುತ್ತಮುತ್ತ ಕೊಂತಿ ಪೂಜೆ, ಹಾಸನ ಜಿಲ್ಲೆ ಸುತ್ತಮುತ್ತ ತಿಂಗಳು ಮಾವನ ಪೂಜೆ,ಕರಾವಳಿ ಜಿಲ್ಲೆಗಳ ಹಾಲಕ್ಕಿ ಒಕ್ಕಲಿಗರ ಹೆಣ್ಣುಮಕ್ಕಳು ಮಳೆಗಾಗಿ ಪ್ರಾರ್ಥಿಸುತ್ತಾ ತಾರಲೇ ಬಾರಲೇ ಎಂದು ಆಹ್ವಾನಿಸುತ್ತಾ ಗುಂಪುಗುಂಪಾಗಿ ನರ್ತಿಸುತ್ತಾರೆ.ರಾಯಚೂರು ಜಿಲ್ಲೆಯ ಕಡೆಗೆ ದೊಡ್ಡ ದೊಡ್ಡ ಮಡಕೆಗಳಲ್ಲಿ ಹಾಲು ತುಂಬಿಕೊಂಡು ಮಳೆ ಬರಲಿ ಎಂದು ಭೂಮಿಗೆ ಹಾಲೆರೆಯುತ್ತಾರೆ.ಕೆಲವು ಗ್ರಾಮಗಳಲ್ಲಿ ಮುದ್ದೆ ಮಾಡಿಕೊಂಡು ಗುಡ್ಡದ ತುದಿ ಹತ್ತಿ ಅವುಗಳನ್ನು ಮೇಲಿನಿಂದ ಉರುಳಿಬಿಡುತ್ತಾರೆ,ಮುದ್ದೆಯಂಥ ದೊಡ್ಡ ದೊಡ್ಡ ಮಳೆ ಹನಿಗಳು ಬೀಳುತ್ತವೆ ಎಂಬ ನಂಬುಗೆ ಅವರದು.ನೀರು ತುಂಬಿದ ಚೆರಿಗೆ ಹುಗಿಯುವುದು,ಎಲೆ ಮುಚ್ಚಿದ ಬೊರಲು ಚಂಬನ್ನು ಹಿಡಿದೊಯ್ಯುವುದು, ಮಳೆರಾಯನ ಆಟ ಗುರ್ಚಿವಾಡುವ ಹುಡುಗನ ಮೇಲೆ ನೀರು ಹೊಯ್ಯುವುದು, ರುದ್ದರಾಭೀಷೇಕ ಮಾಡಿ ದೇವರನ್ನು ಮುಳುಗು ಹಾಕುವ ಶಿಕ್ಷೆ ನೀಡುವುದು,ಕತ್ತೆಗಳನ್ನು ಸಿಂಗರಿಸಿ ಮದುವೆ ಮೆರವಣಿಗೆ ಮಾಡುವುದು,ಹಸ್ತ ಚಿತ್ತ ಮಳೆಗಳು ಬರದೇ ಹೋದಾಗ ದಪ್ಪ ತಪ್ಪಟೆ ಬಡಿದು ಹೋ ಹೋ ಎಂದು ಕಿರುಚುವುದು,ದೇವಸ್ಥಾನ ಹತ್ತಿರ ಸಂತೆ ಹೂಡುವುದು, ಕುರುಬರು ಕಂಬಳಿ ಬೀಸುವುದು ಇಂಥ ಅನೇಕ ಆಚರಣೆಗಳು ನಡೆದುಕೊಂಡು ಬಂದಿವೆ,ಅದರಲ್ಲೂ ಉತ್ತರ ಕರ್ನಾಟಕದ ಜೋಕುಮಾರನ ಆಚರಣೆ ಹೆಚ್ಚು ಜನಪ್ರಿಯ.ಜೋಕುಮಾರ ಮಳೆ ತರುವ ದೇವರು ಸಮೃದ್ಧಿಯ ಸಂಕೇತ, ಜನಪದರು ಎಲ್ಲ ದೈವಗಳಿಗಿಂತ ಮಳೆ ದೇವರು ದೊಡ್ಡವನು ಎಂದು ಸಾರಿದ್ದಾರೆ ಅವರ ಒಂದು ಹಾಡು ಹೀಗಿದೆ.

**ಹರಿವ ಹಾವಿನ ಗಂಡ,**
**ಉರಿವ ಕಿಚ್ಚಿನ ಗಂಡ,**
**ಹಿಂಡುರಾಜರ ಗಂಡ – ಪುಂಡ ಮಳೆರಾಜ**

ಯಾವುದೇ ಹಾವಿದ್ದರೂ ಅದು ಮಳೆಯ ಅರ್ಭಟಕ್ಕೆ ಹರಿದು ಹೋಗಲೇಬೇಕು,ಎಂಥ ಬೆಂಕಿ ಹೊತ್ತಿಕೊಂಡರೂ ಮಳೆಯ ನರ್ತನಕ್ಕೆ ತಣ್ಣಗಾಗಲೇ ಬೇಕು,ಬೇಕಾದಷ್ಟು ರಾಜ್ಯ, ಸಾಮ್ರಾಜ್ಯಗಳಿದ್ದರೂ,ಎಂಥ ರಾಜನಿದ್ದರೂ ಮಳೆಗೆ ತಲೆಬಾಗಲೇಬೇಕು ಅದಕ್ಕೇಂದೇ ಜನಪದರು ಪುಂಡ ಮಳೆರಾಜನೆಂದು ಸಾರಿದ್ದಾರೆ.ಏನೇ ಆಗಲಿ ಜನಪದರೇ ಹೇಳುವಂತೆ ಆದರೆ ಮಳೆಗಾಲ, ಹೋದ್ರೆ ಕೊನೆಗಾಲ.

* * *

**ವಿಳಾಸ :**
**ಡಾ. ಪ್ರಕಾಶ ಗ.ಖಾಡೆ,**
**ಶ್ರೀ ಗುರು,ಮನೆ ನಂ.ಎಸ್.135,**
**ನವನಗರ, ಬಾಗಲಕೋಟ,-587103,**
**ಮೊ.9845500890**

# ವೈದ್ಯರ ದಿನಾಚರಣೆ: ಧಾರವಾಡದ ಹಿರಿಯ ವೈದ್ಯರನ್ನು ಸನ್ಮಾನ




**ಧಾರವಾಡ :** ಐಎಮ್ಎ ಧಾರವಾಡ ಶಾಖೆಯು 25 ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿದ ಧಾರವಾಡದ ಹಿರಿಯ ವೈದ್ಯರನ್ನು ಸನ್ಮಾನಿಸುವ ಮೂಲಕ ವೈದ್ಯರ ದಿನವನ್ನು ಆಚರಿಸಿತು. ಐಎಂಎ ಧಾರವಾಡದ ಅಧ್ಯಕ್ಷ ಡಾ.ಸತೀಶ ಇರಕಲ್ ಅವರು, ವೈದ್ಯರ ಪ್ರಾಮಾಣಿಕತೆ, ಸಮರ್ಪಣೆ ಮತ್ತು ಕಠಿಣ ಪರಿಶ್ರಮವನ್ನು ಶ್ಲಾಘಿಸಿದರು.

ಮಾನವೀಯತೆಗೆ ತಮ್ಮ ನಿಸ್ವಾರ್ಥ ಸೇವೆಯನ್ನು ನೀಡಿದ ಎಲ್ಲರ ಸೇವೆಗಳನ್ನು ಗುರುತಿಸಿ. ಧಾರವಾಡದ ಹಿರಿಯ ವೈದ್ಯರು, ಡಾ.ಬಿ.ಸಿ.ವಸ್ತ್ರದ್, ಡಾ.ಸತೀಶ್ ಇರ್ಕಲ್, ಡಾ.ನವೀನ್ ಮಂಕಣಿ, ಡಾ.ಸಂತೋಷ್ ಜೀವಣ್ಣವರ್, ಡಾ.ಸಂದೀಪ್ ಪ್ರಭು, ಡಾ.ಅಕ್ತರ್ ಜಹಾನ್, ಡಾ.ವಂದನಾ ಗ್ರಾಮಪುರೋಹಿತ, ಡಾ.ಬೀನಾ ಕುಲಕರ್ಣಿ, ದ್ರೀನಾ ಕುಲ್ಡಯ್. ಡಾ.ರವಿಕುಮಾರ್ ಜಾಧವ್, ಡಾ.ಕವಿತಾ ಜಾಧವ್ ಅವರನ್ನು ಸನ್ಮಾನಿಸಲಾಯಿತು.

ಡಾ.ರಾಜನ್ ದೇಶಪಾಂಡೆ ಅವರು ರೋಗಿಗಳಿಗೆ ಚಿಕಿತ್ಸೆ ನೀಡುವಾಗ ಉನ್ನತ ನೈತಿಕತೆಯನ್ನು ಕಾಪಾಡಿಕೊಳ್ಳಲು ಮತ್ತು ಲಭ್ಯವಿರುವ ಅತ್ಯುತ್ತಮ ಸೌಲಭ್ಯಗಳಲ್ಲಿ ಕಡಿಮೆ ವೆಚ್ಚದ ಚಿಕಿತ್ಸೆಯನ್ನು ನೀಡಲು ಯುವ ವೈದ್ಯರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುಖ್ಯ ಅತಿಥಿ" ನ್ಯಾಯವಾದಿ ವೀರೇಶ ಬೂದಿಹಾಳ್ ಅವರು ಕೋವಿಡ್ ಸಂದರ್ಭದಲ್ಲಿ ಜೀವ ಉಳಿಸಲು ಹೋರಾಡಿದ ಆರೋಗ್ಯ ವೃತ್ತಿಪರರಿಗೆ ಕೃತಜ್ಞತೆ ಸಲ್ಲಿಸಿದರು ಮತ್ತು ಕರ್ನಾಟಕ ವೈದ್ಯಕೀಯ ಮಂಡಳಿಯ ಸದಸ್ಯರಾಗಿ ನಾಮನಿರ್ದೇಶನಗೊಂಡ ಡಾ.ಸುಧೀರ ಜಂಬಗಿ, ಅತ್ಯುತ್ತಮ ಆರೋಗ್ಯ ವೃತ್ತಿಪರ ಪ್ರಶಸ್ತಿ ಪಡೆದ ಡಾ.ಬೀನಾ ಕುಲಕರ್ಣಿ ಅವರನ್ನು ಸನ್ಮಾನಿಸಿದರು.

ಹಿರಿಯ ವೈದ್ಯರಾದ ಡಾ.ವೈ.ಎನ್. ಇರಕಲ್, ಡಾ.ಆರ್.ಜಿ.ಪುರಾಣಿಕ್, ಡಾ.ಹಂದಿಗೋಳ್, ಡಾ.ನಾಡಕರ್ಣಿ, ಡಾ.ಹುಕ್ಕೇರಿ, ಡಾ.ಪೈ, ಡಾ.ಸಾಂಬ್ರಾಣಿ, ಡಾ.ಕವಿತಾ ಮಂಕಣಿ, ಡಾ.ವಾಣಿ ಇರ್ಕಲ್, ಡಾ.ಸುಹಾಸ ಹಂಚಿನಮನಿ, ಡಾ.ಉಮಾ ಸುಲ್ತಾನಪುರಿ, ಡಾ.ಸಂತೋಷಿ ದರ್ಗಾಡ್, ಡಾ.ಕಿರಣ್ ಕುಲಕರ್ಣಿ ಉಪಸ್ಥಿತರಿದ್ದರು.

# ಪುರುಷ ಮಹಿಳಾ ವಿಭಾಗದಲ್ಲಿ ಗೆದ್ದು ಬೀಗಿದ ಮೈಸೂರು

**ತೇರದಾಳ :** ಇಲ್ಲಿನ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಬೆಂಗಳೂರು ರಾಜೀವ ಗಾಂಧಿ ಆರೋಗ್ಯ ವಿಶ್ವ ವಿದ್ಯಾಲಯಗಳ ರಾಜ್ಯ ಮಟ್ಟದ ವಾಲಿಬಾಲ್ ಪಂದ್ಯಾವಳಿಯ ಫೈನಲ್ ಪಂದ್ಯಾವಳಿಯಲ್ಲಿ ಮೈಸೂರಿನ ಎಂಎಂಸಿ ಪುರುಷ ಹಾಗೂ ಮಹಿಳೆಯರ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆಯುವ ಮೂಲಕ ಚಾಂಪಿಯನ್‌ಶಿಪ್ ಪಡೆದುಕೊಂಡಿತು.

ಪುರುಷರ ಫೈನಲ್ ಪಂದ್ಯಾವಳಿಯಲ್ಲಿ ಶಿವಮೊಗ್ಗದ ಶರಾವತಿ ತಂಡವನ್ನು ಮೈಸೂರಿನ ಎಂಎಂಸಿ ತಂಡ, 25-18, 25-19 ಅಂಕಗಳಿಂದ ಮಣಿಸಿ ಗೆಲುವಿನ ನಗೆ ಬೀರಿತು. ಮೂರನೇ ಸ್ಥಾನವನ್ನು ಬೆಂಗಳೂರಿನ ತಂಡ ಪಡೆದುಕೊಂಡರೆ ತೇರದಾಳ ದಾನಿಗೊಂಡ ಮೆಡಿಕಲ್ ಕಾಲೇಜ್ ತಂಡ ನಾಲ್ಕನೇ ಸ್ಥಾನಕ್ಕೆ ತೃಪ್ತಿಗೊಂಡಿತು. ಮಹಿಳಾ ವಿಭಾಗದಲ್ಲಿ ತೇರದಾಳ ದಾನಿಗೊಂಡ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ತಂಡದ ವಿರುದ್ಧ ಮೈಸೂರಿನ ಎಂಎಂಸಿ ಮಹಿಳಾ ತಂಡ, 25-21, 25-19 ಅಂಕಗಳಿಂದ ಸೋಲಿಸಿತು. ಮೂರನೇ ಸ್ಥಾನಕ್ಕೆ ನಡೆದ ಪಂದ್ಯದಲ್ಲಿ ಬೆಂಗಳೂರಿನ ಶ್ರೀ ಶ್ರೀ ತಂಡ ವಿರುದ್ಧ ದಾವಣಗೇರಿಯ ತಂಡ 26-24, 25-18 ಅಂಕಗಳಿಂದ ಗೆದ್ದು ಮೂರನೇ ಸ್ಥಾನ ಪಡೆದುಕೊಂಡಿತು. ಕ್ವಾಟರ್, ಸೆಮಿಫೈನಲ್ ಪಂದ್ಯಗಳು ಬಹಳಷ್ಟು ರೋಚಕದಿಂದ ನಡೆದು ಪ್ರೇಕ್ಷಕರನ್ನು ರಂಜಿಸಿದವು. ಉತ್ತಮ ಸರ್ವಿಸ್, ಪ್ಲೇಸಿಂಗ್, ಬ್ಲಾಕ್, ಶಾಟ್ ಹೀಗೆ ಹಲವು ರೀತಿಯಲ್ಲಿ ಕ್ರೀಡಾಪಟುಗಳು ತಮ್ಮ ಆಟವನ್ನು ಪ್ರದರ್ಶನ ಮಾಡಿ ತಮ್ಮ ತಂಡಗಳನ್ನು ಗೆಲುವಿನ ದಡಕ್ಕೆ ಸೇರಿಸಿದರು.

ಫುಲ್ ಖುಷ್-ಮೂರು ದಿನಗಳ ಕಾಲ ನಡೆದ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ನೂರಕ್ಕೂ ಅಧಿಕ ತಂಡಗಳಿಂದ ಎರಡು ಸಾವಿರದಷ್ಟು ಕ್ರೀಡಾಪಟುಗಳು ತೇರದಾಳಕ್ಕೆ ಆಗಮಿಸಿದ್ದರು. ಇದೇ ಮೊದಲ ಬಾರಿಗೆ ಹಮ್ಮಿಕೊಂಡ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಯನ್ನು ಹಮ್ಮಿಕೊಂಡಿದ್ದ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯ ವ್ಯವಸ್ಥೆಗೆ ಕ್ರೀಡಾಪಟುಗಳು ಫುಲ್ ಖುಷ್ ಆದರು. ವಸತಿ, ಊಟ, ಉಪಹಾರ, ಉಪಚಾರ, ಮೈದಾನ ಎಲ್ಲವೂ ಬಹಳಷ್ಟು ಅಚ್ಚುಕಟ್ಟಾಗಿ ಮಾಡಿರುವುದಕ್ಕೆ ಹಾಗೂ ಪ್ರತಿದಿನ ರಾತ್ರಿ ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕ್ರೀಡಾಪಟುಗಳು ಫುಲ್ ಫಿದಾಗೊಂಡರು. ಸಂಸ್ಥೆ ಚೇರಮನ್ ಡಾ. ಮಹಾವೀರ ದಾನಿಗೊಂಡ, ವ್ಯವಸ್ಥಾಪಕ ನಿರ್ದೇಶಕ ಡಾ. ಪುಷ್ಪದಂತ ದಾನಿಗೊಂಡ, ಮೆಡಿಕಲ್ ಕಾಲೇಜ್ ಪ್ರಾಚಾರ್ಯ ಡಾ. ಪಿ.ಬಿ. ಅಪರಾಜ, ದೈಹಿಕ ಶಿಕ್ಷಣ ನಿರ್ದೇಶಕ ರಾಮು ಹಾಡಕರ, ಆಡಳಿತಾಧಿಕಾರಿ ರಾಜೇಂದ್ರ ಪರೀಟ ಪಂದ್ಯಾವಳಿಗಳು ಯಶಸ್ವಿಗೆ ಸಾಕಷ್ಟು ಶ್ರಮ ವಹಿಸಿದರು. ತೀರ್ಪುಗಾರರಾಗಿ ಅಂತರಾಷ್ಟ್ರೀಯ ತೀರ್ಪುಗಾರ ಜಾಗೀರದಾರ, ಸುರೇಶ ಮರಡಿ, ಪೆಂಡಾರಿ, ಲಕ್ಕಪ್ಪ ಗಂಟಿ ಇನ್ನಿತರರು ಕಾರ್ಯ ನಿರ್ವಹಿಸಿದರು.

# ಪತ್ರಿಕಾ ದಿನಾಚರಣೆ: ಪತ್ರಕರ್ತರ ಕಾರ್ಯ ಶ್ಲಾಘನೀಯ



**ನವಲಗುಂದ :** ಒತ್ತಡದ ಬದುಕಿನಲ್ಲಿ ಕರ್ತವ್ಯ ನಿರ್ವಹಿಸುವ ಪತ್ರಕರ್ತರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿಕೊಳ್ಳಬೇಕು. ಪ್ರಸುತ್ತ ವಿದ್ಯಮಾನಗಳನ್ನು ಜನರಿಗೆ ತಲುಪಿಸುತ್ತಾ, ಸಮಾಜವನ್ನು ಸುಧಾರಿಸುವ ಕೆಲಸ ಮಾಡುವ ಪತ್ರಕರ್ತರ ಕಾರ್ಯ ಶ್ಲಾಘನೀಯವಾದದ್ದು ಎಂದು ರೈತ ಮುಖಂಡ ಬಸನಗೌಡ ಪಾಟೀಲ ಹೇಳಿದರು. ಅವರು ನಗರದ ಪ್ರವಾಸಿ ಮಂದಿರದಲ್ಲಿ ತಾಲೂಕ ಕಾರ್ಯನಿರತ ಪತ್ರಕರ್ತ ಧ್ವನಿ ಸಂಘ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ಪತ್ರಿಕಾ ದಿನಾಚರಣೆಯ ಕಾರ್ಯಕ್ರಮವನ್ನು ಸಸಿಗೆ ನಿರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಉಪಾಧ್ಯಕ್ಷ ಈಶ್ವರ ಲಕ್ಕುಂಡಿ ಮಾತನಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪತ್ರಿಕೋದ್ಯಮ ನಾಲ್ಕನೇ ಅಂಗವಾಗಿದ್ದು ಪತ್ರಕರ್ತರ ಸೇವೆ ಅಪಾರವಾಗಿದೆ. ಆದರೆ ಇಂದು ಪತ್ರಕರ್ತರಿಗೆ ರಕ್ಷಣೆ ಇಲ್ಲದಂತಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಂದೀಶ ಸಂಗಟಿ ಮಾತನಾಡಿ ಸರ್ಕಾರವು ಪತ್ರಕರ್ತರಿಗೆ ರಕ್ಷಣೆ ನೀಡುವುದರ ಜೊತೆಗೆ ಉಚಿತ ಬಸ್ ಪಾಸ್ ನೀಡುವುದಾಗಿ ಹೇಳಿದೆ ಆದರೆ ಇನ್ನು ಕಾರ್ಯರೂಪಕ್ಕೆ ಬಂದಿಲ್ಲ ಬೇಗನೆ ಉಚಿತ ಬಸ್ ಪಾಸ್ ನೀಡುವಂತೆ ಮನವಿ ಮಾಡಿದ ಅವರು ಪ್ರತಿ ತಾಲೂಕಿನಲ್ಲಿ ಪತ್ರಿಕಾ ಭವನ ನಿರ್ಮಾಣಕ್ಕೆ ಸರ್ಕಾರಕ್ಕೆ ಧನಸಹಾಯ ನೀಡುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತರಾದ ಅಬ್ದುಲರಜಾಕ ನದಾಫ, ಶಿವು ನಾಯಕ ಖಾದರಸಾಬ್ ನದಾಫ್, ಯಲ್ಲಪ್ಪ ಭೋವಿ, ಮಮತಾಜ್ ನದಾಫ್, ಬಾಬಾಜಾನ ಶಿರಕೋಳ, ಧರ್ಮರಾಜ ಗುಳೇದ ಗಂಗಾಧರ ಕತ್ತಿ, ಶರೀಫ್ ಹುಡೇದ ಕೃಷ್ಣರಡ್ಡಿ ಕುರಹಟ್ಟಿ ಇತರರು ಉಪಸ್ಥಿತರಿದ್ದರು.

ಇಸ್ಮಾಯಿಲ್ ನದಾಫ್ ಪ್ರಸ್ತಾವಿಕವಾಗಿ ಮಾತನಾಡಿದರು. ಶಂಕರ ಸುಬೇಧಾರಮಠ ಕಾರ್ಯಕ್ರಮ ನಿರೂಪಿಸಿದರು, ಸಂಜಯ ಗುರಿಕಾರ ವಂದಿಸಿದರು.

# ಇವರನ್ನೇ ಸಿಎಂ ಮಾಡಿ ಎನ್ನುವುದು ಮಠಾಧೀಶರ ಕೆಲಸವಲ್ಲ: ಜಯಮೃತ್ಯುಂಜಯ ಸ್ವಾಮೀಜಿ




**ಹುಬ್ಬಳ್ಳಿ :** ಯಾವುದೇ ಸರ್ಕಾರದಲ್ಲಿ ಇವರನ್ನೇ ಮುಖ್ಯಮಂತ್ರಿ ಮಾಡಿ ಎಂದು ಹೇಳುವುದು ಮಠಾಧೀಶರ ಕೆಲಸವಲ್ಲ. ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವುದು ಆಡಳಿತ ಪಕ್ಷದ ಶಾಸಕರ ಕೆಲಸ.

ಸರ್ಕಾರ ಸಲಹೆ ಕೇಳಿದರೆ ಸಮಾಜದ ಗುರುಗಳಾಗಿ ಕೊಡಬಹುದು ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು. ನಗರದಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ಪಾದಯಾತ್ರೆಯ ನಂತರ ಇವರನ್ನೇ ಮಂತ್ರಿ ಮಾಡಿ ಅಂತಾ ಹೇಳುವುದನ್ನು ಬಿಟ್ಟಿದ್ದೇವೆ. ನಮ್ಮ ಗುರಿ ಏನಿದ್ದರೂ ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ಕೊಡಿಸುವುದು ಎಂದರು.

ಮಹಾರಾಷ್ಟ್ರದಲ್ಲಿ ಮರಾಠಾ ಮೀಸಲಾತಿ ಹೋರಾಟದಿಂದ ಸ್ಫೂರ್ತಿ ಪಡೆದು ಹೋರಾಟ ಮಾಡುತ್ತಿದ್ದೇವೆ. ಸರ್ಕಾರ ಪಂಚಮಸಾಲಿ ಸಮಾಜದ ಬೇಡಿಕೆಗೆ ಸ್ಪಂದಿಸಿ 2ಎ ಮೀಸಲಾತಿ ಸಿಗುವವರೆಗೆ ಹೋರಾಟ ಮಾಡುತ್ತೇವೆ. ಮಳೆಗಾಲದ ಅಧಿವೇಶನದಲ್ಲಿ ಸರ್ಕಾರ ಮೀಸಲಾತಿ ಘೋಷಿಸಬೇಕು. ಅಧಿವೇಶನದಲ್ಲಿ ಮೀಸಲಾತಿ ಹಕ್ಕು ಪ್ರತಿಪಾದಿಸಲು ಸಮಾಜದ ಶಾಸಕರನ್ನು ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಜುಲೈ 6ರಂದು ಹುಬ್ಬಳ್ಳಿಯಲ್ಲಿ ಪತ್ರ ಚಳುವಳಿ ನಡೆಯಲಿದೆ. ಅಂದು ಶಾಸಕ ಎಂ.ಆರ್.ಪಾಟೀಲ್, ಅರವಿಂದ ಬೆಲ್ಲದ್ ಮನೆಗೆ ಹೋಗಿ ಆಗ್ರಹ ಪತ್ರ ನೀಡಲಾಗುವುದು. ನಮ್ಮ ಶಾಸಕರು ಅಧಿವೇಶನದಲ್ಲಿ ಮೀಸಲಾತಿಗೆ ಆಗ್ರಹಿಸದೇ ಇರುವುದು ಸಮಾಜಕ್ಕೆ ನಿರಾಸೆ ಮೂಡಿಸಿದೆ ಎಂದು ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

# ನೈರುತ್ಯ ರೈಲುಗಳ ಸಂಚಾರ ಸಮಯದಲ್ಲಿ ಬದಲಾವಣೆ

**ಹುಬ್ಬಳ್ಳಿ:** ಜುಲೈ 4ರಂದು SMVT ಬೆಂಗಳೂರಿನಿಂದ 23:40 ಗಂಟೆಗೆ ಹೊರಡಲಿರುವ ರೈಲು ಸಂಖ್ಯೆ 12509 ಖಬಗಿಖ ಬೆಂಗಳೂರು-ಗುವಾಹಟಿ ಎಕ್ಸ್‌ಪ್ರೆಸ್ ರೈಲು ಫುಟ್ ಓವರ್ ಬ್ರಿಡ್ಜ್ ಮತ್ತು ಸುರಕ್ಷತೆಗೆ ಸಂಬಂಧಿಸಿದ ಕಾಮಗಾರಿಯ ಹಿನ್ನೆಲೆಯಲ್ಲಿ ತನ್ನ ಪ್ರಯಾಣದ ಸಮಯದಲ್ಲಿ 60 ನಿಮಿಷ ಮಾರ್ಗಮಧ್ಯೆ ನಿಯಂತ್ರಿಸಲ್ಪಡುತ್ತದೆ ಎಂದು ಪೂರ್ವ ಕರಾವಳಿ ರೈಲ್ವೆ ತಿಳಿಸಿದೆ. ಜಡ್ರಾಮಕುಂಟಿ-ಆಲಮಟ್ಟಿ ನಿಲ್ದಾಣಗಳ ನಡುವೆ ಅಗತ್ಯ ಎಂಜಿನಿಯರಿಂಗ್ ಮತ್ತು ಸುರಕ್ಷತೆಗೆ ಸಂಬಂಧಿಸಿದ ಕಾಮಗಾರಿ ಇರುವುದರಿಂದ ಈ ಕೆಳಗಿನ ರೈಲುಗಳು ತಮ್ಮ ಮೂಲ ನಿಲ್ದಾಣದಿಂದ ತಡವಾಗಿ ಹೊರಡಲಿದೆ.

ಜುಲೈ 8ರಂದು ವಿಜಯಪುರದಿಂದ ಹೊರಡುವ ರೈಲು ಸಂಖ್ಯೆ 06920 ವಿಜಯಪುರ-ಎಸ್ಎಸ್ಎಸ್ ಹುಬ್ಬಳ್ಳಿ ಡೈಲಿ ಪ್ಯಾಸೆಂಜರ್ ಸ್ಪೆಷಲ್ ರೈಲು ನಿಗದಿತ ಸಮಯಕ್ಕಿಂತ 80 ನಿಮಿಷ ತಡವಾಗಿ ಹೊರಡಲಿದೆ.

ಜುಲೈ 8ರಂದು ವಿಜಯಪುರದಿಂದ ಹೊರಡುವ ರೈಲು ಸಂಖ್ಯೆ 17308 ಬಾಗಲಕೋಟೆ-ಮೈಸೂರು ಬಸವ ಡೈಲಿ ಎಕ್ಸ್‌ಪ್ರೆಸ್ ರೈಲು ನಿಗದಿತ ಸಮಯಕ್ಕಿಂತ 30 ನಿಮಿಷ ತಡವಾಗಿ ಹೊರಡಲಿದೆ.

ಜುಲೈ 7ರಿಂದ ಅನ್ವಯವಾಗುವಂತೆ ದಾದರ್ ಮತ್ತು ಎಸ್ಎಸ್ಎಸ್ ಹುಬ್ಬಳ್ಳಿ ನಿಲ್ದಾಣಗಳ ನಡುವೆ ಸಂಚರಿಸುವ ಡೈಲಿ ಎಕ್ಸ್‌ಪ್ರೆಸ್ ರೈಲನ್ನು ಕಿರ್ಲೋಸ್ಕರವಾಡಿ ನಿಲ್ದಾಣದಲ್ಲಿ (ಈ ನಿಲ್ದಾಣ ಕರಾಡ ಮತ್ತು ಸಾಂಗ್ಲಿ ನಿಲ್ದಾಣಗಳ ನಡುವೆ ಇದೆ) ಪ್ರಾಯೋಗಿಕ ಆಧಾರದ ಮೇಲೆ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಮಧ್ಯ ರೈಲ್ವೆ ಮಾಹಿತಿ ನೀಡಿದೆ.

ರೈಲು ಸಂಖ್ಯೆ 17318 ದಾದರ್-ಎಸ್ಎಸ್ಎಸ್ ಹುಬ್ಬಳ್ಳಿ ಡೈಲಿ ಎಕ್ಸ್‌ಪ್ರೆಸ್ ರೈಲು ಕಿರ್ಲೋಸ್ಕರವಾಡಿ ನಿಲ್ದಾಣಕ್ಕೆ ಬೆಳಿಗ್ಗೆ 04:18 ಗಂಟೆಗೆ ಆಗಮಿಸಿ, 2 ನಿಮಿಷ ನಿಂತು, 04:20 ಗಂಟೆಗೆ ನಿರ್ಗಮಿಸಲಿದೆ.

ರೈಲು ಸಂಖ್ಯೆ 17317 ಎಸ್ಎಸ್ಎಸ್ ಹುಬ್ಬಳ್ಳಿ-ದಾದರ್ ಡೈಲಿ ಎಕ್ಸ್‌ಪ್ರೆಸ್ ರೈಲು ಕಿರ್ಲೋಸ್ಕರವಾಡಿ ನಿಲ್ದಾಣಕ್ಕೆ ರಾತ್ರಿ 21:58 ಗಂಟೆಗೆ ಆಗಮಿಸಿ, 2 ನಿಮಿಷ ನಿಂತು 22:00 ಗಂಟೆಗೆ ನಿರ್ಗಮಿಸಲಿದೆ ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ.ಮಂಜುನಾಥ ಕನಮಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೃತಪಟ್ಟ ಕುಟುಂಬಕ್ಕೆ 3ಲಕ್ಷ ಪರಿಹಾರ ನೀಡಿದ ಸಚಿವ ಶಿವಾನಂದ್ ಪಾಟೀಲ್



**ಕೊಲ್ಹಾರ :** ತೆಪ್ಪ ದುರಂತದಲ್ಲಿ ಸಾವನಪ್ಪಿದ ಪುಂಡಲೀಕ ಯಂಕಂಚಿ, ದಶರಥ ಗೌಡರ ಸೂಳಿಬಾವಿ, ತಯ್ಯಬ್ ಚೌಧರಿ, ಮಹಿಬೂಬ ವಾಲಿಕಾರ, ರಫೀಕ್ ಬಾಂಬೆ ಮನೆಗೆ ಸಚಿವ ಶಿವಾನಂದ ಪಾಟೀಲ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿ ಮೃತಪಟ್ಟ 5 ಜನ ಕುಟುಂಬದವರಿಗೆ ವೈಯಕ್ತಿಕವಾಗಿ 3ಲಕ್ಷ ಪರಿಹಾರ ನೀಡಿದರು.

ಘಟನಾಸ್ಥಳದಲ್ಲಿ ಪರಿಶೀಲನೆ ನಡೆಸಿ ಎಸ್ಪಿ, ಡಿಸಿ ಅವರಿಂದ ಮಾಹಿತಿ ಪಡೆದ ಸಚಿವರು ಶವ ಪತ್ತೆ ಕಾರ್ಯಾಚರಣೆ ಬಗ್ಗೆ ಮಾಹಿತಿ ಪಡೆದು ಪರಿಶೀಲನೆ ಬಳಿಕ ಇದೊಂದು ನಾಗರಿಕ ಸಮಾಜ ತಲೆ ತಗ್ಗಿಸುವಂತದ್ದು ಈ ದುರ್ಘಟನೆ ನಡೆಯಬಾರದಿತ್ತು ಮೇಲ್ನೋಟಕ್ಕೆ ಅವರು ಇಸ್ಪೀಟ್ ಆಡುವಾಗ ಪಿಎಸ್ಐ ರೇಡ್ ಮಾಡಿದ್ರು ಎನ್ನಲಾಗ್ತಿದೆ ಗ್ರಾಮಸ್ಥರಿಂದಲು ಮಾಹಿತಿ ಪಡೆಯುವೆ ಈ ಘಟನೆಗೆ ವಿಷಾದ ವ್ಯಕ್ತಪಡೆಸುತ್ತೇನೆ ಅನೇಕ ಯುವಕರು ವಿವಾಹಿತರು, ಅವಿವಾಹಿತರು ಇದ್ದಾರೆ ಅವರ ಜೊತೆಗೆ ಮಾತನಾಡಿದಾಗ ಸಂಕಷ್ಟ ಅರ್ಥವಾಗುತ್ತೆ ಬಳಿಕ ಪರಿಹಾರದ ಬಗ್ಗೆ ಮಾಹಿತಿ ನೀಡ್ತೇನೆ ಈ ಘಟನೆಯಲ್ಲಿ ಎರಡು ವರ್ಷನ್ ಇವೆ ಇಸ್ಪೀಟ್ ಆಡ್ತಿದ್ರು ಎನ್ನುವ ಮಾತುಗಳಿವೆ, ಜನರ ವರ್ಷನ್ ಬೇರೆ ಇದೆ.

ಸರ್ಕಾರದಿಂದ ಪರಿಹಾರ ಕೊಡಲು ಬಂದ್ರೆ ಪರಿಹಾರ ಕೊಡ್ತೇವೆ. ಯಾವ ರೀತಿ ಸಹಾಯ ಮಾಡಲು ಸಾಧ್ಯ ಸಹಾಯ ಮಾಡುವೆ ಮೃತ ದೇಹಗಳು ಸಿಗುತ್ತವೆ

ಈಜು ಬರೋರು ಈಜಿ ಹೊರಗೆ ಬಂದಿದ್ದಾರೆ, ಈಜು ಬಾರದವರು ಸಿಕ್ಕಿಕೊಂಡಿದ್ದಾರೆ ವಿಜಯಪುರ ಜಿಲ್ಲೆಯಲ್ಲಿ ಗ್ಯಾಂಬ್ಲಿಂಗ್ (ಜೂಜು) ಹೆಚ್ಚಾಗಿದೆ ಎನ್ನುವ ಆರೋಪ ವಿಚಾರ ಜಿಲ್ಲೆಯಲ್ಲಿ ಗಣ್ಯರೇ ಗ್ಯಾಮ್ಲಿಂಗ್ ಆಡಿಸ್ತಾರೆ ಎನ್ನುವ ಮಾಹಿತಿ ಇದೆ ಜನರು ಸಾಕ್ಷಿ ಸಮೇತ ಮಾಹಿತಿ ಕೊಡ್ತಿಲ್ಲ ಈ ವಿಚಾರ ಐಜಿ ಎಸ್ಪಿ ಜೊತೆಗೆ ಹಂಚಿಕೊಂಡಿದ್ದೇನೆ ನಾನು ಸಹ ಐಜಿ ಅವರಿಗೆ ಮಾಹಿತಿ ಹಂಚಿಕೊಂಡಿದ್ದೆ ಗಣ್ಯ-ರೆ ಜೂಜು ಆಡಿಸ್ತಾರೆ ಎಷ್ಟೇ ಬಲಾಢ್ಯರಿದ್ದರು ಅವರ ಮೇಲೆ ಕ್ರಮ ಕೈಗೊಳ್ಳಬೇಕು ಯಾರೇ ಆದರೂ ಜೂಜು ಆಡಿಸಬಾರದು ಈ ಘಟನೆ ಸಮಾಜವೇ ತಲೆ ತಗ್ಗಿಸುವಂತದ್ದು ಇಂಥ ಕೆಲಸಗಳಿಗೆ ಪ್ರೇರಣೆ ನೀಡಬಾರದು ಬಲಾಢ್ಯರು ಆಡಿಸ್ತಾರೆ, ಸಣ್ಣವರು ಆಡ್ತಾ-ರೆ ಮೃತರ ಕುಟುಂಬಸ್ಥರಿಂದ ಪಿಎಸ್ಐ ವಿರುದ್ಧ ಗಂಭೀರ ಆರೋಪ ವಿಚಾರ ಕುಟುಂಬಸ್ಥರು ದೂರು ನೀಡಿ-ದರೆ ಪಿಎಸ್ಐ ವಿರುದ್ಧ ತನಿಖೆ ನಡೆಸಲಾಗುತ್ತೆ ದೂರು ನೀಡದೆ ಇದ್ದರು ಪಿಎಸ್ಐ ವಿರುದ್ಧ ತನಿಖೆಗೆ ನಡೆಸುತ್ತೇವೆ ಎಂದರು ಪೊಲೀಸರು ಬಲಾಢ್ಯರು ಜೂಜು ಆಡಿಸುವಾಗ ಹಿಡಿಯದೆ ಇದ್ದ-ರೆ ಸಣ್ಣ ಪುಟ್ಟ ಜನ ಜೂಜಲ್ಲಿ ಭಾಗಿಯಾಗ್ತಾರೆ ತನಿಖೆ ಬಳಿಕ ಸತ್ಯ ಬಯಲಿಗೆ ಬರಲಿದೆ. ಇಡೀ ಘಟನೆ ಸಿಎಂ ಗಮನಕ್ಕೆ ತಂದಿದ್ದೇನೆ ಡಿಸಿ-ಎಸ್ಪಿ ತನಿಖೆ ಬಳಿಕ ಮಾಹಿತಿ ನೀಡುತ್ತೇನೆ ಎಂದು ಸಚಿವ ಶಿವಾನಂದ್ ಪಾಟೀಲ್ ಹೇಳಿದರು,

ಈ ವೇಳೆ ಮಾಜಿ ಜಿ.ಪಂ ಸದಸ್ಯ ಕಲ್ಲು ದೇಸಾಯಿ,ತಹಸೀಲ್ದಾರ್ ಎಸ್. ಎಸ್.ನಾಯಕಲ್ ಮಠ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಫೀಕ ಪಕಾಲಿ ಸೇರಿದಂತೆ ಅನೇಕರು ಇದ್ದರು.

# ಹಾಲು, ಪೆಟ್ರೋಲ್, ಡಿಸೇಲ್, ಪಂಪ್‌ಸೆಟ್ ವಿದ್ಯುತ್ ದರ ಹೆಚ್ಚಳ ಖಂಡಿಸಿ ಬಿಜೆಪಿ ರೈತ ಮೋರ್ಚಾ ಪ್ರತಿಭಟನೆ




**ವಿಜಯಪುರ :** ಹಾಲಿನ ದರ, ಪಂಪಸೆಟ್‌ಗಳ ವಿದ್ಯುತ್ ದರ ಏರಿಕೆ ಖಂಡಿಸಿ ಬಿಜೆಪಿ ಜಿಲ್ಲಾ ರೈತ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಡಿಸಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಗುರಲಿಂಗಪ್ಪ ಅಂಗಡಿ ಅವರು ಮಾತನಾಡಿ, ಹಾಲಿನ ದರ ಹೆಚ್ಚಳ ಮಾಡಿದ್ದು, ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಕೂಡಾ ಬಿಡುಗಡೆ ಮಾಡಿಲ್ಲ ಎಂದು ಹೇಳಿದರು.

ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅಧಿಕ ಪ್ರಮಾಣದ ಹಣವನ್ನು ಸ್ವೀಕರಿಸಲಾಗುತ್ತಿದೆ. ಇದರಿಂದ ರಾಜ್ಯದಲ್ಲಿ ಕೃಷಿ, ತೋಟಗಾರಿ-ಕೆ ಹಾಗೂ ಕೃಷಿ ಉತ್ಪನ್ನ ಕುಂಠಿತವಾಗುತ್ತಿದೆ. ದಿಢೀರ ಡಿಸೈಲ್ ಬೆಲೆ ಏರಿಕೆಯಿಂದ ಯಂತ್ರೋಪಕರಣಗಳ ಮೂಲಕ ನಡೆಸುವ ಕೃಷಿ ಕೆಲಸಗಳಿಗೆ ರೈತರು ದುಬಾರಿ ಬಾಡಿಗೆ ಹಣ ನೀಡುತ್ತಿದ್ದಾರೆ. ಇದರಿಂದಾಗಿ ಅವರ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗುತ್ತಿದೆ ಎಂದು ತಿಳಿಸಿದರು.

ರೈತ ಮಕ್ಕಳ ವಿದ್ಯಾನಿಧಿ ಯೋಜನೆ ಸ್ಥಗಿತಗೊಳಿಸಿದ್ದರಿಂದ ಮಕ್ಕಳ ಕಲಿಕೆಗೂ ತೊಂದರೆಯಾಗುತ್ತಿದೆ ಎಂದೂ ಅವರು ನುಡಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಆರ್.ಎಸ್, ಪಾಟೀಲ ಮಾತನಾಡಿ, ಸರಕಾರ ಬೀಜ ಮತ್ತು ರಸ ಗೊಬ್ಬರ ದರ ಏರಿಸುವ ಮೂಲಕ ರೈತರಿಗೆ ಇನ್ನಷ್ಟು ಸಂಕಷ್ಟಕ್ಕೆ ತಳ್ಳಿದೆ. ಕಳೆದ ಒಂದು ದಶಕದಿಂದ ಕನಿಷ್ಠ 200ರೂ ಗಳಿಗೆ 1 ಕೆ.ಜಿ ಬಿತ್ತನೆ ಬೀಜ ಲಭ್ಯವಾಗುತ್ತಿತ್ತು. ಸರಕಾರ ಇದಕ್ಕೆ 25ರೂ ಗಳನ್ನು ಮಾತ್ರ ಸಹಾಯಧನ ನೀಡುತ್ತಿತ್ತು. ಇಂದು ಅದೇ ಬಿತ್ತನೆ ಬೀಜ 800 ರೂ ಗಳಿಗೂ ಅಧಿಕ ದರದಲ್ಲಿ ಸಿಗುತ್ತಿದೆ. ಆದರೆ ಸಕಾರದ ಸಹಾಯ ಧನ ಮಾತ್ರ ಹೆಚ್ಚಳವಾಗಿಲ್ಲ. ಇದ-ರಿಂದ ರೈತರಿಗೆ ಇನ್ನಷ್ಟು ಆರ್ಥಿಕ ಹೊರೆಯಾಗುತ್ತಿದೆ. ರೈತರಿಗೆ ಸಹಾಯಧನವನ್ನು ಶೇ.75ರಷ್ಟು ಅಥವಾ ಶೇ.50ರಷ್ಟು ನೀಡಿ ಕೃಷಿ ಕ್ಷೇತ್ರ-ಕ್ಕೆ ಉತ್ತೇಜನಗೊಳಿಸಬೇಕಾಗಿದೆ. ಅಂದಾಗ ಮಾತ್ರ ಈ ಯೋಜನೆಗೆ ಒಂದು ಅರ್ಥ ಸಿಗಲಿದೆ ಇಲ್ಲವಾದರೆ ಹೆಸರಿಗೆ ಮಾತ್ರ ಈ ಯೋಜನೆ ಆಗಲಿದೆ ಎಂದು ತಿಳಿಸಿದರು.

ಚಂದ್ರಶೇಖರ ಕವಟಗಿ, ಈರಣ್ಣ ರಾವೂರ, ಮಾಳುಗೌಡ ಪಾಟೀಲ, ಬಾಲರಾಜ ರೆಡ್ಡಿ, ರಾಜಶೇಖರ ಡೊಳ್ಳಿ, ಸುರೇಶ ಬಿರಾದಾರ, ರೇಣುಕಾ ಪರಸಪ್ಪಗೌಳ, ರಾಚಪ್ಪ ಬಿರಾದಾರ, ಡಿ.ಜಿ. ಬಿರಾದಾರ, ಅಶ್ವಿನಿ ಪಟ್ಟಣಶೆಟ್ಟಿ, ಕುಮಾರ ನಿಡೋಣಿ,ಸ್ವಪ್ನಾ ಕಣಮುಚನಾಳ, ಪಾಂಡುಸಾಹುಕಾರ ದೊಡಮನಿ ಮತ್ತಿತರರು ಇದ್ದರು.

# ಸಂಶೋಧನೆಗಾಗಿ ಹುಡುಕಾಡುವಿಕೆ ನಿರಂತರ ಪ್ರಕ್ರಿಯೆ: ಪೂಜಾರಿ

**ವಿಜಯಪುರ :** ಜಗತ್ತಿನಲ್ಲಿ ಸಾಮಾಜಿಕ ಸಂಶೋಧನೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂದು ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಚಂದ್ರ ಪೂಜಾರಿ ಹೇಳಿದರು. ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಮಹಿಳಾ ಅಧ್ಯಯನ ಕೇಂದ್ರ ಹಾಗೂ ಪ. ಜಾ/ ಪ. ಪಂ ನಿರ್ದೇಶನಾಲಯದ ಸಹಯೋಗದೊಂದಿಗೆ ಗುರುವಾರ ಆಯೋಜಿಸಿದ್ದ 'ಸಂಶೋಧನಾ ವೈಧಾನಿಕತೆ' ಕಾರ್ಯಾಗಾರದ ಎರಡನೆಯ ದಿನದ ಕಾರ್ಯಾಗಾರದ ಮೊದಲನೆ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಂಶೋಧಕರುಗಳು ಸಂಶೋಧನಾ ಪರಿಕಲ್ಪನೆಗಳನ್ನು ಸರಿಯಾಗಿ ಅರ್ಥೈಸುವ, ವ್ಯಾಖ್ಯಾನಿಸುವ, ಪರೀಕ್ಷಿಸುವ ಹಾಗೂ ವಿಮರ್ಶಿಸುವ ಜ್ಞಾನವನ್ನು ಪಡೆಯಬೇಕಾಗುತ್ತದೆ. ಜ್ಞಾನ ಒಂದು ಕ್ಷಣಕ್ಕೆ, ಗಂಟೆಗೆ,ದಿನಕ್ಕೆ ಬರುವುದಿಲ್ಲ.ಇದು ನಿರಂತರವಾದ ಅಧ್ಯಯನ, ಆಲೋಚನೆಯಿಂದ ಮಾತ್ರ ಬರುತ್ತದೆ. ಸಂಶೋಧಕರುಗಳಿಗೆ ಸೂಕ್ಷ್ಮತೆ ಇರಬೇಕಾಗುತ್ತದೆ.ಸಂಶೋಧನಾ ಸಮಸ್ಯೆಗಳಿಗೆ ಉತ್ತರಗಳನ್ನು ಸೈದ್ಧಾಂತಿಕವಾಗಿ,ತಾರ್ಕಿಕವಾಗಿ, ಕ್ರಿಯಾತ್ಮಕವಾಗಿ ಹುಡುಕಬೇಕಾಗುತ್ತದೆ. ಈ ಹುಡುಕಾಡುವಿಕೆ ನಿರಂತರವಾದ ಕ್ರಿಯೆ ಮತ್ತು ಪ್ರಕ್ರಿಯೆಯಾಗಿರುತ್ತದೆ ಎಂದರು.

ಸಾಮಾಜಿಕ ಜಗತ್ತಿನಲ್ಲಿ ಹಲವು ಸಂಶೋಧನಾ ಸಮಸ್ಯೆಗಳು ಇವೆ. ಅವುಗಳನ್ನು ಗ್ರಹಿಸುವ, ಸಂಶೋಧನೆಯ ಚೌಕಟ್ಟಿನಲ್ಲಿ ತರುವ ಕೆಲಸವನ್ನು ಸಂಶೋಧಕರುಗಳು ಮಾಡಬೇಕಾಗುತ್ತದೆ. ಸಂಶೋಧಕರು ತಾವು ಆಯ್ಕೆ ಮಾಡಿಕೊಂಡ ವಿಷಯದ ಕುರಿತು ಸಂಬಂಧಿಸಿದ ಸಾಹಿತ್ಯವನ್ನು ನಿರಂತರ ಅಧ್ಯಯನ ಮಾಡಬೇಕು. ಸಾಹಿತ್ಯ ಅವಲೋಕನ ಸಂಶೋಧನೆಯ ಮೊದಲ ಹೆಜ್ಜೆ. ಸಂಶೋಧಕರು ವಿಚಾರ, ಆಚಾರ ಮತ್ತು ಅಧಿಕಾರ ನಡುವೆ ಇರುವ ಸಂಬಂಧವನ್ನು ಅರ್ಥ ಮಾಡಿಕೊಳ್ಳಬೇಕು. ಸಾಂಪ್ರದಾಯಿಕ ಚೌಕಟ್ಟನ್ನು ಮೀರಿದಾಗ ಮಾತ್ರ ಹೊಸ ಚಿಂತನೆ ಹುಟ್ಟುತ್ತದೆ ಎಂದರು.

ಎರಡನೆ ಗೋಷ್ಠಿಯಲ್ಲಿ ಬಳ್ಳಾರಿಯ ಕೃಷ್ಣದೇವರಾಯ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಪ್ರೊ. ಅರುಣಕುಮಾರ ಲಗಶೆಟ್ಟಿ ಮಾತನಾಡಿ, ಸಂಶೋಧಕರುಗಳು ಓದುವ, ಬರೆಯುವ ಅಭಿರುಚಿ ಬೆಳೆಸಿಕೊಳ್ಳಬೇಕು. ವಿಜ್ಞಾನ,ಸಮಾಜ ವಿಜ್ಞಾನ, ವಾಣಿಜ್ಯ ಇತ್ಯಾದಿ ಎಲ್ಲ ನಿಕಾಯಗಳ ಸಂಶೋಧನೆಗಳು ಸಮಾಜಮುಖಿ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಎಂದರು.

ಪ್ರೊ. ಸಂಜೀವಕುಮಾರ ಗಿರಿ, ಡಾ. ಭಾಗ್ಯಶ್ರೀ ದೊಡಮನಿ, ಡಾ. ಸರೋಜಾ ಸಂತಿ, ಡಾ. ಶಶಿಕಲಾ ರಾಠೋಡ, ಡಾ. ರಜಿಯಾ ನದಾಫ, ವಿವಿಧ ವಿಭಾಗದ ಸಂಶೋಧನಾ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಭಾ-ಗಿಯಾಗಿದ್ದರು. ಕಾರ್ಯಕ್ರಮದಲ್ಲಿ ಮಹಿಳಾ ಅಧ್ಯಯನ ಕೇಂದ್ರ ಮತ್ತು ಪ.ಜಾ /ಪ.ಪಂಗಡದ ನಿರ್ದೇಶಕಿ ಪ್ರೊ. ಲಕ್ಷ್ಮೀದೇವಿ ವಾಯ್ ಸಂಪನ್ಮೂಲ ವ್ಯಕ್ತಿಗಳನ್ನು ಸ್ವಾಗತಿಸಿದರು. ಸಂಶೋಧನಾ ವಿದ್ಯಾರ್ಥಿನಿಯರಾದ ಗಿರಿಜಾ ನವಲಿಮಠ ಕಾರ್ಯಕ್ರಮ ನಿರೂಪಿಸಿದರು. ಹೀನಾ ವಂದಿಸಿದರು.

# ಯಕ್ಕುಂಡಿ ಗ್ರಾಮದಲ್ಲಿ ಕಾಶಿ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಮಹೋತ್ಸವ




**ವಿಜಯಪುರ :** ಜಿಲ್ಲೆಯ ಬಬಲೇಶ್ವರ ತಾಲೂಕಿನ ಯಕ್ಕುಂಡಿ ಗ್ರಾಮದಲ್ಲಿ ಶ್ರೀಮದ್ ಕಾಶಿ ಜ್ಞಾನ ಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 1008 ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗತ್ಪಾದಂಗಳವರ ಅಡ್ಡ ಪಲ್ಲಕ್ಕಿ ಮಹೋತ್ಸವ ವೈಭವಯುತವಾಗಿ ನಡೆಯಿತು.

ಯಕ್ಕುಂಡಿ ಗ್ರಾಮದಲ್ಲಿ ಶ್ರೀ ಹನುಮಾನ ದೇವಸ್ಥಾನದ ಬದರಿನಾಥ ಶೈಲಿಯ ಶಿಖರದ ಕಳಸಾರೋಹನದ ವಿಶೇಷ ಕಾರ್ಯಕ್ರಮ ನಿಮಿತ್ತ ಪ್ರಮುಖ ಬೀದಿಗಳಲ್ಲಿ ಆರತಿ ಮತ್ತು ಕುಂಭ ಮೇಳದೊಂದಿಗೆ ಕಾಶೀ ಜಗದ್ಗುರುಗಳವರ ಅಡ್ಡ ಪಲ್ಲಕ್ಕಿ ಉತ್ಸವ ಹಾಗೂ ಶಿಖರದ ಪಂಚ ಕಳಸ ಮೆರವಣಿಗೆ ಹಾಗೂ ಧರ್ಮಸಭೆ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮದಲ್ಲಿ ಜಗದ್ಗುರುಗಳು ಗ್ರಾಮದಲ್ಲಿ ಜನರ ಭಕ್ತಿ,ಸಂಸ್ಕಾರದ ಹಿರಿಮೆ ಗರಿಮೆಯನ್ನು ಕುರಿತು ಆಶೀರ್ವಚನ ನೀಡುತ್ತಾ ಎಲ್ಲ ಭಕ್ತಿಗಳಲ್ಲಿ ಶ್ರವಣ ಭಕ್ತಿ ದೊಡ್ಡದು ಗ್ರಾಮಸ್ಥರು ಬಹಳ ಶ್ರದ್ಧೆಯಿಂದ ಕಾರ್ಯಕ್ರಮ ಯಶಸ್ವಿಗೊಳಿಸಿದ್ದೀರಿ. ಕೇಳಿದ್ದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಜಂಬಗಿ ಕೆಂಗಲಗುತ್ತಿ ಹಿರೇಮಠದ ಪೂಜ್ಯರು, ಮಮದಾಪೂರ ವಿರಕ್ತಮಠದ ಪೂಜ್ಯರು, ಗುಳೇದಗುಡ್ಡದ ಅಮರೇಶ್ವರ ಮಠದ ಪೂಜ್ಯರು,ಬೀಳಗಿ ಕಲ್ಮಠದ ಪೂಜ್ಯರು ಉಪಸ್ಥಿತರಿದ್ದು, ಎಲ್ಲಾ ಪೂಜ್ಯರು ಯಕ್ಕುಂಡಿ ಗ್ರಾಮದ ಸದ್ಭಕ್ತರು ತೋರಿದ ಭಕ್ತಿಯಿಂದ ಒಂಬತ್ತು ದಿನ ಕೇಳಿದ ಪ್ರವಚನ, ಧ್ಯಾನದ ಜೊತೆಗೆ ದುಶ್ಚಟಗಳ ಭಿಕ್ಷೆ ಸದ್ಗುಣಗಳ ದೀಕ್ಷೆ ಕುರಿತು ಮಾತನಾಡಿದರು.

ಬಸಯ್ಯ ಹಿರೇಮಠ ಸ್ವಾಗತಿಸಿದರು. ಗುಣದಾಳ ಕಲ್ಯಾಣ ಹಿರೇಮಠದ ಡಾ. ವಿವೇಕಾನಂದ ದೇವರು ನಿರೂಪಿಸಿ, ವಂದಿಸಿದರು.

